ಆ)	ಸರ್ಕಾರದ ಆಡಳಿತಾತ್ಮಕ ಅನುಮೋದನೆಯಂತೆ ಹೆಚ್ಚುವರಿ ಕಾಮಗಾರಿಗಳನ್ನು ಕೈಗೊಂಡು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು? (ಪೂರ್ಣ ವಿವರ ನೀಡುವುದು)	ಈ ಕಾಮಗಾರಿಗೆ ತಾತ್ವಿಕ ಅನುಮೋದನೆ ನೀಡಲಾಗಿದ್ದು, ಅನುದಾನದ ಕೊರತೆಯಿಂದಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಬೆಂಗಳೂರು ನಗರದ ಆನೇಕಲ್ ತಾಲ್ಲೂಕು ಕ್ರೀಡಾಂಗಣದಲ್ಲಿ ಆಟದ ಮೈದಾನ, ಚೈನ್ ಲಿಂಕ್ ಬೇಲಿ, ವಿದ್ಯುತ್ ವ್ಯವಸ್ಥೆ, ನೀರು ಸರಬರಾಜು, ಶೌಚಾಲಯ ಹಾಗೂ ಪೆವಿಲಿಯನ್ ಕಟ್ಟಡ ಸೌಲಭ್ಯ ಕಲ್ಪಿಸಲಾಗಿದೆ. ಅಲ್ಲದೆ ರೂ.50.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಪ್ರೇಕ್ಷಕರ ಗ್ಯಾಲರಿ ನಿರ್ಮಿಸಲು ದಿನಾಂಕ: 19.02.2020ರಂದು ಆಡಳಿತಾತ್ಮಕ ಅನುಮೋದನೆ ನೀಡಿ, ಮೊದಲನೇ ಕಂತಾಗಿ ರೂ.25.00 ಲಕ್ಷಗಳ ಅನುದಾನವನ್ನು ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ನಿಗಮ ನಿಯಮಿತ ಸಂಸ್ಥೆಗೆ ಬಿಡುಗಡೆ ಮಾಡಲಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದ್ದು, ಶೇ.90ರಷ್ಟು ಕಾಮಗಾರಿ ಪೂರ್ಣಗೊಂಡಿರುತ್ತದೆ.

ವೈಎಸ್ ಡಿ- ಇಬಿಬಿ/128/2020

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ
ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1479

ಉತ್ತರಿಸಬೇಕಾಗಿದ್ದ ದಿನಾಂಕ : 15.12.2020

ಸದಸ್ಯರ ಹೆಸರು : ಶ್ರೀ ಈಶ್ವರ್ ಖಂಡ್ರೆ (ಭಾಲ್ಕಿ)

ಉತ್ತರಿಸುವ ಸಚಿವರು : ಮಾನ್ಯ ಯುವ ಸಬಲೀಕರಣ ಮತ್ತು ಕ್ರೀಡಾ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಕ್ರ.ಸ.	ಪ್ರಶ್ನೆ	ಉತ್ತರ
ಅ)	ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಕೈಗೊಂಡಿರುವ ಯೋಜನೆ ಮತ್ತು ಕಾಮಗಾರಿಗಳು ಯಾವುವು; ಆ ಯೋಜನೆ ಮತ್ತು ಕಾಮಗಾರಿಗಳಿಗೆ ಸರ್ಕಾರ ಹಂಚಿಕೆ ಮಾಡಿರುವ ಅನುದಾನ ಎಷ್ಟು; ಈ ಪೈಕಿ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ವಿವರ ಒದಗಿಸುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಬೀದರ್ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಈ ಕೆಳಕಾಣಿಸಿದ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ :

2017-18

ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)
1. ಹುಮನಾಬಾದ ತಾಲ್ಲೂಕು ಕ್ರೀಡಾಂಗಣದಲ್ಲಿ ಪುರುಷ ಮತ್ತು ಸ್ತ್ರೀಯರ ಶೌಚಾಲಯ ಹಾಗೂ ಗ್ರೌಂಡ್ ದುರಸ್ಥಿ.	13.00	13.00
2. ಔರಾದ ತಾಲ್ಲೂಕು ಕ್ರೀಡಾಂಗಣದ ಕಾಂಪೌಂಡು ಗೋಡೆ ನಿರ್ಮಾಣ	5.00	5.00
3. ಬಸವಕಲ್ಯಾಣ ತಾಲ್ಲೂಕು ಕ್ರೀಡಾಂಗಣದಲ್ಲಿ ಒಳಾಂಗಣ ಕ್ರೀಡಾಂಗಣದ ಛಾವಣಿ ರಿಪೇರಿ	3.00	3.00
4. ಒಳಾಂಗಣ ಕ್ರೀಡಾಂಗಣ, ಕ್ರೀಡಾ ವಸತಿ ನಿಲಯ ಮತ್ತು ಈಜುಕೊಳಗಳಿಗೆ ಸುಣ್ಣ ಬಣ್ಣ ಮಾಡುವುದು	4.00	4.00
5. ಒಳಾಂಗಣ ಕ್ರೀಡಾಂಗಣದ ಷಟಲ್ ಬ್ಯಾಡ್ಮಿಂಟನ್ ಅಂಕಣದ ಲೈಟ್ ದುರಸ್ಥಿ	0.87	0.87
ಒಟ್ಟು	25.87	25.87

2018-19

ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ ಲಕ್ಷಗಳಲ್ಲಿ)
1. ಬೀದರ್ ತಾಲ್ಲೂಕಿನ ಬಹುಮನಿ ಕ್ಲಬ್ ನಲ್ಲಿ ಗರಡಿ ಮನೆ ನಿರ್ಮಾಣ.	10.00	10.00

		2.	ಹುಮನಾಬಾದ ತಾಲ್ಲೂಕು ಕ್ರೀಡಾಂಗಣದಲ್ಲಿ ಕಾಂಪೌಂಡು, ಗಾರ್ಡ್ ರೂಂ ನಿರ್ಮಾಣ.	9.00	9.00
		3.	ಬೀದರ್ ಒಳಾಂಗಣ ಕ್ರೀಡಾಂಗಣದ ಹಿಂಭಾಗಕ್ಕೆ ರಫ್ ಪರಸಿ, ವಾಟರ್ ಪೈಪ್ ಲೈನ್ ಮತ್ತು ಕ್ರೀಡಾ ವಸತಿ ಶಾಲೆ ಹೊಸ ಕೊಠಡಿ, ಒಳಾಂಗಣ ಕ್ರೀಡಾಂಗಣಕ್ಕೆ ಸುಣ್ಣ ಬಣ್ಣ ಬಳಿಯುವುದು.	5.00	5.00
		4.	ಔರಾದ ತಾಲ್ಲೂಕು ಕ್ರೀಡಾಂಗಣದ ಕಾಂಪೌಂಡು ಗೋಡೆ, ಬೋರ್ ವೆಲ್ ಕೊರೆಸಿ ನೀರಿನ ಪೈಪ್ ಲೈನ್ ಅಳವಡಿಸುವುದು.	5.00	5.00
		5.	ಬಸವಕಲ್ಯಾಣ ತಾಲ್ಲೂಕು ಕ್ರೀಡಾಂಗಣದ ಒಳಾಂಗಣ ಕ್ರೀಡಾಂಗಣ ಛಾವಣಿ ರಿಪೇರಿ, ಕುಡಿಯುವ ನೀರಿನ ವ್ಯವಸ್ಥೆ ಮತ್ತು ಇನ್ನಿತರ ದುರಸ್ತಿ ಕಾಮಗಾರಿ	3.00	3.00
		6.	ಬೀದರ್ ತಾಲ್ಲೂಕಿನ ಕಮಠಾಣಾ ಗ್ರಾಮದಲ್ಲಿ ಪ್ರಾದೇಶಿಕ ಯುವ ಕೇಂದ್ರ ಸ್ಥಾಪಿಸಲು ಕಟ್ಟಡ ನಿರ್ಮಾಣ	5.00	5.00
		7.	ಒಳಾಂಗಣ ಕ್ರೀಡಾಂಗಣ ಹಿಂದುಗಡೆ ಸಾದ ಪರಸಿ ನೆಲಹಾಸು ಅಳವಡಿಸುವುದು	2.50	2.50
			ಒಟ್ಟು	**39.50**	**39.50**

		2019-20ನೇ ಸಾಲು		
		ಕಾಮಗಾರಿ ವಿವರ	ಹಂಚಿಕೆಯಾದ ಅನುದಾನ (ರೂ. ಲಕ್ಷಗಳಲ್ಲಿ)	ವೆಚ್ಚ (ರೂ. ಲಕ್ಷಗಳಲ್ಲಿ)
		1. ಬೀದರ್ ನಗರದ ನೆಹರೂ ಜಿಲ್ಲಾ ಕ್ರೀಡಾಂಗಣದಲ್ಲಿ ಪ್ರೇಕ್ಷಕರ ಗ್ಯಾಲರಿ, ಒಳಾಂಗಣ ಮತ್ತು ಈಜುಕೊಳ ಅಭಿವೃದ್ಧಿ	100.00	75.00
		ಒಟ್ಟು	**100.00**	**75.00**
ಆ)	ಈ ಯೋಜನೆ ಮತ್ತು ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮ ಏನು; ಪ್ರತ್ಯೇಕ ತನಿಖೆಗೆ ಆದೇಶ ನೀಡಲಾಗುವುದೇ; (ವಿವರ ಒದಗಿಸುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಮಂಜೂರಾದ ಕಾಮಗಾರಿಗಳ ಅನುಷ್ಠಾನದಲ್ಲಿ ಯಾವುದೇ ಹಣ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.		
ಇ)	ಅನೇಕ ಕಾಮಗಾರಿಗಳಿಗೆ ಮಂಜೂರಾದ ಅನುದಾನ ದುರ್ಬಳಕೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು)	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಮಂಜೂರಾದ ಯಾವುದೇ ಅನುದಾನ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.		

ವೈಎಸ್ ಡಿ- ಇಬಿಬಿ/129/2020

(ಡಾ||ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ
ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1465
2. ವಿಧಾನ ಸಭಾ ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್.ಎನ್. (ಬಾಗೇಪಲ್ಲಿ)
3. ಉತ್ತರಿಸುವ ದಿನಾಂಕ : 15-12-2020
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಬೆಂಗಳೂರು ಮಹಾನಗರದಲ್ಲಿ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ (ಎನ್.ಓ.ಸಿ.) ಪಡೆಯದ ಕಟ್ಟಡಗಳ ಸಂಖ್ಯೆ ಎಷ್ಟು; (ಬೆಂಗಳೂರು ಪೂರ್ವ ವಲಯದ ಕಟ್ಟಡಗಳ ವಿವರ ನೀಡುವುದು)	ಪ್ರಸ್ತುತ ಗುರುತಿಸಲಾದಂತೆ ಬೆಂಗಳೂರು ಮಹಾ ನಗರದಲ್ಲಿ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪಡೆಯದೇ ಇರುವ ಸುಮಾರು 15,048 ಕಟ್ಟಡಗಳನ್ನು ಗುರುತಿಸಲಾಗಿದೆ. ಬೆಂಗಳೂರು ಪೂರ್ವದಲ್ಲಿ ಸುಮಾರು 8,970 ಕಟ್ಟಡಗಳನ್ನು ಗುರುತಿಸಲಾಗಿದೆ.
ಆ)	ಹೋಟೆಲ್ ಮತ್ತು ವಸತಿ ಗೃಹಗಳಿಗೆ ಮಾತ್ರ ಅಗ್ನಿಶಾಮಕ ಇಲಾಖೆಯ ನಿರಾಕ್ಷೇಪಣಾ ಪ್ರಮಾಣ ಪತ್ರ ಅನ್ವಯವಾಗುವುದೇ;	ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ:07-07-2011 ರಂತೆ 15 ಮೀಟರ್ ಎತ್ತರದ ಎಲ್ಲಾ ಕಟ್ಟಡಗಳನ್ನು ಬಹುಮಹಡಿ ಕಟ್ಟಡಗಳೆಂದು ಪರಿಗಣಿಸಲಾಗುತ್ತದೆ ಹಾಗೂ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನು ಪಡೆಯುವುದು ಕಡ್ಡಾಯವಾಗಿರುತ್ತದೆ
ಇ)	ಸುಮಾರು 70 ರಿಂದ 80 ಕೊಠಡಿಗಳಿರುವ ಪಿ.ಜಿ. ಕಟ್ಟಡಗಳಿಗೆ ಈ ನಿಯಮ ಅನ್ವಯವಾಗುವುದಿಲ್ಲವೇ;	ಅನ್ವಯವಾಗುತ್ತದೆ.
ಈ)	ಹೋಟೆಲ್‌ಗಳಿಗೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆದಿಲ್ಲವೆಂದು ವಿದ್ಯುತ್ ಸಂಪರ್ಕ ಹಾಗೂ ನೀರಿನ ಸಂಪರ್ಕ ಕಡಿತ ಮಾಡಲು ಕಾರಣಗಳೇನು;	ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 33 ಎಸ್‌ಎಫ್‌ಬಿ 2011, ದಿನಾಂಕ:07-07-2011 ರಲ್ಲಿ ನೀಡಲಾದ ಸೂಚನೆಗಳು ಉಲ್ಲಂಘನೆಯಾಗಿರುವುದರಿಂದ ವಿದ್ಯುತ್ ಸಂಪರ್ಕ ಕಡಿತ ಮಾಡಲಾಗುತ್ತಿದೆ.
ಉ)	ಸರ್ಕಾರದ ನಿಯಮಾವಳಿಯಲ್ಲಿ ಪಿ.ಜಿ ಕಟ್ಟಡಗಳಿಗೆ ಇತರೆ ಬಹುಮಹಡಿ ಕಟ್ಟಡಗಳಿಗೆ ಅಗ್ನಿಶಾಮಕ ಇಲಾಖೆಯಿಂದ ನಿರಾಕ್ಷೇಪಣಾ ಪತ್ರ ಪಡೆಯುವುದರಿಂದ ವಿನಾಯಿತಿ ನೀಡಲಾಗಿದೆಯೆ;	ಯಾವುದೇ ವಿನಾಯಿತಿ ನೀಡಲಾಗಿರುವುದಿಲ್ಲ.
ಊ)	ಪ್ರಸ್ತುತ ಬೆಂಗಳೂರು ಪೂರ್ವ ವಲಯದ ಎಷ್ಟು ಕಟ್ಟಡಗಳಿಗೆ ಈ ಕಾರಣಕ್ಕಾಗಿ ನೋಟೀಸ್ ನೀಡಿ ವಿದ್ಯುತ್ ಹಾಗೂ ನೀರಿನ ಸಂಪರ್ಕ ಕಡಿತ ಮಾಡಲಾಗಿದೆ? (ವಿವರ ನೀಡುವುದು)	ಬೆಂಗಳೂರು ಪೂರ್ವ ವಲಯದ ಕಟ್ಟಡಗಳಿಗೆ ನೀಡಲಾದ ನೋಟೀಸ್ ವಿವರಗಳು ಈ ಕೆಳಕಂಡಂತೆ ನೀಡಲಾಗಿದೆ. ನೋಟೀಸ್ ನೀಡಿದ ಕಟ್ಟಡದ ಸಂಖ್ಯೆ: 201 ವಿದ್ಯುತ್ ಸಂಪರ್ಕ ಕಡಿತ ಮಾಡಿರುವ ಸಂಖ್ಯೆ: 66 ಅದರಲ್ಲಿ, ಕೆಲವು ಕಟ್ಟಡದ ಮಾಲೀಕರು ನ್ಯಾಯಾಲಯದ ಮೊರೆ ಹೋಗಿ ತಾತ್ಕಾಲಿಕ ತಡೆಯಾಜ್ಞೆ ಪಡೆದಿರುತ್ತಾರೆ ಮತ್ತು ಕೆಲವು ಕಟ್ಟಡದ ಮಾಲೀಕರು ಕೆಳವರ್ಗದ ಕಟ್ಟಡವನ್ನಾಗಿ ಮಾರ್ಪಡಿಸಿ ಪ್ರಾಂತ್ಯದ ಮುಖ್ಯ ಅಗ್ನಿಶಾಮಕ ಅಧಿಕಾರಿಗಳಿಂದ ಸಲಹಾ ಪತ್ರಗಳನ್ನು ಪಡೆದಿರುತ್ತಾರೆ.

ಸಂಖ್ಯೆ: ಒಇ 220 ಎಸ್‌ಎಫ್‌ಬಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

(14)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: : 1152

ಸದಸ್ಯರ ಹೆಸರು : ಡಾ: ರಂಗನಾಥ.ಹೆಚ್.ಡಿ (ಕುಣಿಗಲ್)

ಉತ್ತರಿಸಬೇಕಾದ ದಿನಾಂಕ : 15-12-2020

ಉತ್ತರಿಸುವವರು : ಮಾನ್ಯ ಮುಖ್ಯ ಮಂತ್ರಿಗಳು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕುಣಿಗಲ್ ತಾಲ್ಲೂಕಿನ ವಿವಿಧ ಇಲಾಖೆಗಳಲ್ಲಿ ಸಿಬ್ಬಂದಿಗಳ ಕೊರತೆ ಇದ್ದು, ಸರ್ಕಾರಿ ಸವಲತ್ತುಗಳನ್ನು ಸಾರ್ವಜನಿಕರಿಗೆ ತಲುಪಿಸಲು ಸಾಧ್ಯವಾಗದಿರುವುದು ಸರ್ಕಾರದ ಗಮನದಲ್ಲಿಯೇ?	ಹೌದು
ಆ)	ಹಾಗಿದ್ದಲ್ಲಿ, ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?	ಪ್ರಸ್ತುತ ಕೋವಿಡ್ -19 ಸೋಂಕು ಇರುವ ಹಿನ್ನೆಲೆಯಲ್ಲಿ, ಆರ್ಥಿಕ ಮಿತವ್ಯಯ ಜಾರಿಯಲ್ಲಿದ್ದು, ಪ್ರಸ್ತುತ, ಯಾವುದೇ ಹೊಸ ನೇಮಕಾತಿಗಳನ್ನು ಮಾಡಲು ನಿರ್ಭಂಧವಿರುತ್ತದೆ. ಆದ್ದರಿಂದ, ಮುಂದಿನ ದಿನಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ನಿಯಮಾನುಸಾರ ಪರಿಶೀಲಿಸಲಾಗುವುದು.

ಕಡತ ಸಂಖ್ಯೆ: ಸಿಆಸುಇ 142 ರಾಸ 2020

[signature]

[ಬಿ.ಎಸ್. ಯಡಿಯೂರಪ್ಪ]
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1371
ಸದಸ್ಯರ ಹೆಸರು	:	ಶ್ರೀ ರಾಮಸ್ವಾಮಿ ಎ.ಟಿ. (ಅರಕಲಗೂಡು)
ಉತ್ತರಿಸಬೇಕಾದ ದಿನಾಂಕ	:	15.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಮತ್ತು ಮಲ್ಲಿಪಟ್ಟಣದಲ್ಲಿ 66/11 ವಿದ್ಯುತ್ ಉಪ ಕೇಂದ್ರಗಳಿಂದ ಐ.ಪಿ ಸ್ಥಾವರಗಳಿಗೆ 7 ಗಂಟೆ ನಿರಂತರ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆಯೇ;	ಅರಕಲಗೂಡು ತಾಲ್ಲೂಕಿನ ದೊಡ್ಡಮಗ್ಗೆ ಮತ್ತು ಮಲ್ಲಿಪಟ್ಟಣದಲ್ಲಿ ಕಾರ್ಯನಿರ್ವಹಿಸುತ್ತಿರುವ 66/11 ವಿದ್ಯುತ್ ಉಪಕೇಂದ್ರಗಳ 12 ಸಂಖ್ಯೆಯ ಐ.ಪಿ. ಫೀಡರ್‌ಗಳಿಂದ, ಸುತ್ತಮುತ್ತಲಿನ ರೈತರ ಕೃಷಿ ಪಂಪ್ ಸೆಟ್ ಗಳಿಗೆ ಹಗಲಿನ ವೇಳೆ 4 ಗಂಟೆ ಹಾಗೂ ರಾತ್ರಿಯ ವೇಳೆ 3 ಗಂಟೆಗಳಂತೆ ಒಟ್ಟು 7 ಗಂಟೆಗಳ ಕಾಲ 3 ಫೇಸ್ ವಿದ್ಯುತ್ ಸರಬರಾಜು ಮಾಡಲಾಗುತ್ತಿದ್ದು, ತಾಂತ್ರಿಕ ಸಾಧ್ಯತೆ ಇಲ್ಲದ ಕಾರಣ ನಿರಂತರ 7 ಗಂಟೆಗಳ ಕಾಲ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ.
ಆ)	ಈ ಐ.ಪಿ ಸ್ಥಾವರಗಳಿಗೆ ನಿರಂತರ ವಿದ್ಯುತ್ ಪೂರೈಸಲು ಇರುವ ತೊಂದರೆಗಳೇನು;	ಪ್ರಸ್ತುತ, ಹಾಸನ 220 ಕೆ.ವಿ ಸ್ವೀಕರಣಾ ಕೇಂದ್ರದಿಂದ ಅರಕಲಗೂಡಿಗೆ 66 ಕೆ.ವಿ ಅರಕಲಗೂಡು-1 ವಿದ್ಯುತ್ ಪ್ರಸರಣಾ ಮಾರ್ಗದಲ್ಲಿ 66/11 ಕೆ.ವಿ ಅರಕಲಗೂಡು, ಮಲ್ಲಿಪಟ್ಟಣ, ದೊಡ್ಡಮಗ್ಗೆ, ಶನಿವಾರಸಂತೆ, ಯಸಳೂರು ಮತ್ತು ಹೆತ್ತೂರು ವಿದ್ಯುತ್ ಉಪ ಕೇಂದ್ರಗಳಿಗೆ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ. ಸದರಿ ಪ್ರಸರಣ ಮಾರ್ಗದ ಮೇಲಿನ ಒತ್ತಡವು ಅಧಿಕವಾಗಿರುವ ಕಾರಣ, ಹಾಲಿ ಇರುವ ವ್ಯವಸ್ಥೆಯಲ್ಲಿ ರೈತರ ಕೃಷಿ ಪಂಪ್ ಸೆಟ್‌ಗಳಿಗೆ 7 ಗಂಟೆಗಳ ಕಾಲ ನಿರಂತರ 3 ಫೇಸ್ ವಿದ್ಯುತ್ ಸರಬರಾಜು ಮಾಡಲು ಸಾಧ್ಯವಾಗುತ್ತಿಲ್ಲ.
ಇ)	ಸದರಿ ವಿದ್ಯುತ್ ಉಪ ಕೇಂದ್ರಗಳಿಂದ ಯಾವ ಕಾಲಮಿತಿಯಲ್ಲಿ ಐ.ಪಿ ಸ್ಥಾವರಗಳಿಗೆ ನಿರಂತರ 7 ಗಂಟೆ ವಿದ್ಯುತ್ ಪೂರೈಸಲಾಗುವುದು? (ವಿವರ ಒದಗಿಸುವುದು)	66 ಕೆ.ವಿ. ಹಾಸನ-ಅರಕಲಗೂಡು-2 ವಿದ್ಯುತ್ ಪ್ರಸರಣ ಮಾರ್ಗದಲ್ಲಿ ಲೊಕೇಷನ್ ನಂ.87 ರಿಂದ 113 ರವರೆಗೆ ವಾಹಕವನ್ನು ಅಳವಡಿಸುವ ಪ್ರಸ್ತಾವನೆಯು ಕ.ವಿ.ಪ್ರ.ನಿ.ನಿ. ಯಲ್ಲಿ ಪರಿಶೀಲನಾ ಹಂತದಲ್ಲಿರುತ್ತದೆ. ಸದರಿ ಕಾಮಗಾರಿಯನ್ನು ಪೂರ್ಣಗೊಳಿಸಿದ ನಂತರ, ದೊಡ್ಡಮಗ್ಗೆ ಮತ್ತು ಮಲ್ಲಿಪಟ್ಟಣ 66/11 ವಿದ್ಯುತ್ ಉಪಕೇಂದ್ರಗಳಿಂದ ರೈತರ ಕೃಷಿ ಪಂಪ್ ಸೆಟ್‌ಗಳಿಗೆ 7 ಗಂಟೆಗಳ ಕಾಲ ನಿರಂತರ 3 ಫೇಸ್ ವಿದ್ಯುತ್ ಸರಬರಾಜು ಮಾಡಬಹುದಾಗಿರುತ್ತದೆ.

ಸಂಖ್ಯೆ: ಎನರ್ಜಿ 214 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	1368
ಸದಸ್ಯರ ಹೆಸರು	:	ಶ್ರೀ ಚಂದ್ರಪ್ಪ ಎಂ. (ಹೊಳಲ್ಕೆರೆ)
ಉತ್ತರಿಸಬೇಕಾದ ದಿನಾಂಕ	:	15.12.2020
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿ ಗ್ರಾಮದಲ್ಲಿ ವಿದ್ಯುತ್ ಸರಬರಾಜು ಘಟಕ (63 ಕೆ.ವಿ.ಎ)ವನ್ನು ಯಾವ ದಿನಾಂಕದಿಂದ ಪ್ರಾರಂಭಿಸಲಾಗಿದೆ;	ಚಿತ್ರದುರ್ಗ ಜಿಲ್ಲೆ, ಹೊಳಲ್ಕೆರೆ ತಾಲ್ಲೂಕು ಮಲ್ಲಾಡಿಹಳ್ಳಿ ಗ್ರಾಮದಲ್ಲಿ 66/11 ಕೆ.ವಿ ವಿದ್ಯುತ್ ಉಪಕೇಂದ್ರವನ್ನು ದಿನಾಂಕ:02.08.2019 ರಂದು ಚಾಲನೆಗೊಳಿಸಲಾಗಿದೆ.
ಆ)	ಈ ಘಟಕದ ಒಟ್ಟು ವೆಚ್ಚವೆಷ್ಟು; ಪ್ರಸ್ತುತ ಘಟಕವು ಕಾರ್ಯಾರಂಭ ಮಾಡಿದೆಯೇ;	ಮಲ್ಲಾಡಿಹಳ್ಳಿ ಗ್ರಾಮದಲ್ಲಿ 66/11 ಕೆ.ವಿ ವಿದ್ಯುತ್ ಉಪಕೇಂದ್ರ ಸ್ಥಾಪನೆಗೆ ತಗುಲಿದ ಒಟ್ಟು ವೆಚ್ಚ ರೂ.857.38 ಲಕ್ಷಗಳಾಗಿರುತ್ತದೆ. ಪ್ರಸ್ತುತ ಸದರಿ ವಿದ್ಯುತ್ ಉಪಕೇಂದ್ರವನ್ನು ಯಾವುದೇ ವಿದ್ಯುತ್ ಹೊರೆ ಹಾಕದೇ (Idle Charge) ಚಾಲನೆಗೊಳಿಸಲಾಗಿರುತ್ತದೆ.
ಇ)	ಹಾಗಿಲ್ಲದಿದ್ದಲ್ಲಿ, ಈ ಘಟಕ ಕಾರ್ಯಾರಂಭ ಮಾಡಲು ಇರುವ ತೊಡಕುಗಳೇನು;	66/11 ಕೆ.ವಿ ಮಲ್ಲಾಡಿಹಳ್ಳಿ ವಿದ್ಯುತ್ ಉಪಕೇಂದ್ರವನ್ನು ಕಾರ್ಯಾರಂಭ ಮಾಡಲು ಲಭ್ಯವಿರುವ 66 ಕೆ.ವಿ ನಲ್ಲೂರು ವಿದ್ಯುತ್ ಮಾರ್ಗದಿಂದ ವಿದ್ಯುತ್ ಸಂಪರ್ಕ ತೆಗೆದುಕೊಳ್ಳಬೇಕಾಗಿರುತ್ತದೆ. ಈಗಾಗಲೇ ಸದರಿ ವಿದ್ಯುತ್ ಮಾರ್ಗಕ್ಕೆ 5 ಸಂಖ್ಯೆಯ 66/11 ಕೆ.ವಿ ವಿದ್ಯುತ್ ಉಪಕೇಂದ್ರಗಳು ಸಂಪರ್ಕಗೊಂಡಿದ್ದು ಸದರಿ ಮಾರ್ಗಕ್ಕೆ ಅಧಿಕ ಹೊರೆಯಾಗುತ್ತಿರುವುದರಿಂದ (ಲೋಡ್) ಕಾರ್ಯಾರಂಭ ಮಾಡಲು ಪ್ರಸ್ತುತ ಸಾಧ್ಯವಾಗುತ್ತಿಲ್ಲ.
ಈ)	ಈ ಘಟಕ ಪ್ರಾರಂಭ ಮಾಡಲು ವಿಳಂಭ ಧೋರಣೆ ತೋರುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರ ಕ್ರಮ ಜರುಗಿಸುವುದೇ;	
ಉ)	ಸುಮಾರು 10 ವರ್ಷಗಳಿಂದ ವಿದ್ಯುತ್ ಸರಬರಾಜು ಆಗದೇ ರೈತರಿಗೆ ತೊಂದರೆಯಾಗಿರುವುದರಿಂದ ಈ ಕುರಿತು ರೈತರು ಅನೇಕ ಬಾರಿ ಪ್ರತಿಭಟನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಊ)	ಬಂದಿದ್ದಲ್ಲಿ, ಯಾವ ಕಾಲಮಿತಿಯಲ್ಲಿ ಈ ವಿದ್ಯುತ್ ಘಟಕಕ್ಕೆ ವಿದ್ಯುತ್ ಸರಬರಾಜು ಮಾಡಿ ಈ ಭಾಗದ ರೈತರ ಸಮಸ್ಯೆ ಬಗೆಹರಿಸಲಾಗುವುದು?	220 ಕೆ.ವಿ ಬೆಂಕಿಕೆರೆ ವಿದ್ಯುತ್ ಉಪಕೇಂದ್ರವನ್ನು ಚಾಲನೆಗೊಳಿಸಿದ ನಂತರ ಮಲ್ಲಾಡಿಹಳ್ಳಿ ವಿದ್ಯುತ್ ಉಪಕೇಂದ್ರಕ್ಕೆ ವಿದ್ಯುತ್ ಸರಬರಾಜು ಮಾಡಬಹುದಾಗಿದೆ.

...2

		ಪ್ರಸ್ತುತ, 220 ಕೆ.ವಿ ಬೆಂಕಿಕೆರೆ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. ಕೋವಿಡ್-19 ಲಾಕ್ ಡೌನ್, ಆರಂಭಿಕ ಮನ್ಸೂನ್ (Early Monsoon), ಚನ್ನಗಿರಿ ಹಾಗೂ ಹೊನ್ನಾಳಿ ತಾಲ್ಲೂಕಿನಲ್ಲಿ ಭಾರಿ ಮಳೆಯಿಂದಾಗಿ ಸದರಿ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತು. ಇದಲ್ಲದೇ, ನೀಲೊಗಲ್ಲು, ಲಿಂಗದಹಳ್ಳಿ, ಮತ್ತು ಸೋಮಶೆಟ್ಟಿಹಳ್ಳಿ ಗ್ರಾಮದ ವ್ಯಾಪ್ತಿಯ ರೈತರು ತಮ್ಮ ಜಮೀನಿನ ವ್ಯಾಪ್ತಿಯಲ್ಲಿ ಬರುವ ವಿದ್ಯುತ್ ಮಾರ್ಗವನ್ನು ಬದಲಿಸುವಂತೆ ಬೇಡಿಕೆ ನೀಡಿರುತ್ತಾರೆ. ಮೇಲ್ಕಂಡ ಎಲ್ಲಾ ಕಾರಣಗಳಿಂದ 220 ಕೆ.ವಿ ಬೆಂಕಿಕೆರೆ ವಿದ್ಯುತ್ ಪ್ರಸರಣ ಮಾರ್ಗದ ಕಾಮಗಾರಿಯು ವಿಳಂಬವಾಗುತ್ತಿದ್ದು, ಸದರಿ ಅಡೆತಡೆಗಳನ್ನು ನಿವಾರಿಸಿ ಏಪ್ರಿಲ್-2021ರೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಿ 220 ಕೆ.ವಿ ಬೆಂಕಿಕೆರೆ ವಿದ್ಯುತ್ ಉಪಕೇಂದ್ರವನ್ನು ಚಾಲನೆಗೊಳಿಸಲು ಉದ್ದೇಶಿಸಲಾಗಿದೆ.

ಸಂಖ್ಯೆ: ಎನರ್ಜಿ 213 ಪಿಪಿಎಂ 2020

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

1.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1496
2.	ವಿಧಾನ ಸಭಾ ಸದಸ್ಯರ ಹೆಸರು	:	ಶ್ರೀ ಆಚಾರ್ ಹಾಲಪ್ಪ ಬಸಪ್ಪ (ಯಲಬುರ್ಗಾ)
3.	ಉತ್ತರಿಸುವ ದಿನಾಂಕ	:	15-12-2020
4.	ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿರುವ ಅಗ್ನಿಶಾಮಕ ಠಾಣೆಗಳ ಸಂಖ್ಯೆ ಎಷ್ಟು? ಸದರಿ ಠಾಣೆಗಳಿಗೆ ಮಂಜೂರು ಮಾಡಲಾದ ಹುದ್ದೆಗಳ ಸಂಖ್ಯೆಯಷ್ಟು; (ವಿವರ ನೀಡುವುದು)	ಕರ್ನಾಟಕ ರಾಜ್ಯ ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಯಲಬುರ್ಗಾ ವಿಧಾನ ಸಭಾ ಕ್ಷೇತ್ರದಲ್ಲಿರುವ ಅಗ್ನಿಶಾಮಕ ಠಾಣೆಗಳ ಸಂಖ್ಯೆ: 02 (ಕುಕನೂರು ಮತ್ತು ಯಲಬುರ್ಗಾ) ಮಂಜೂರು ಮಾಡಲಾದ ಹುದ್ದೆಗಳ ಸಂಖ್ಯೆ : 1. ಕುಕನೂರು –27 ಹುದ್ದೆಗಳು 2. ಯಲಬುರ್ಗಾ –24 ಹುದ್ದೆಗಳು
ಆ)	ಸದರಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ವಿವರಗಳನ್ನು ನೀಡುವುದು;	**ಯಲಬುರ್ಗಾ ಅಗ್ನಿಶಾಮಕ ಠಾಣೆಯ ಹುದ್ದೆಗಳ ಬಲಾಬಲ ವಿವರ** ಹುದ್ದೆಗಳು ವಿವರ / ಮಂಜೂರಾದ ಹುದ್ದೆಗಳು / ಭರ್ತಿಇರುವ ಹುದ್ದೆಗಳು / ಖಾಲಿ ಇರುವ ಹುದ್ದೆಗಳು ಒಟ್ಟು ಹುದ್ದೆಗಳು / 24 / 15 / 09 **ಕುಕನೂರು ಅಗ್ನಿಶಾಮಕ ಠಾಣೆಯ ಹುದ್ದೆಗಳ ಬಲಾಬಲ ವಿವರ** ಹುದ್ದೆಗಳು ವಿವರ / ಮಂಜೂರಾದ ಹುದ್ದೆಗಳು / ಭರ್ತಿಇರುವ ಹುದ್ದೆಗಳು / ಖಾಲಿ ಇರುವ ಹುದ್ದೆಗಳು ಒಟ್ಟು ಹುದ್ದೆಗಳು / 27 / 21 / 06
ಇ)	ಸದರಿ ಠಾಣೆಗಳಿಗೆ ಕಳೆದ ಎರಡು ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಬಿಡುಗಡೆ ಮಾಡಲಾದ ಅನುದಾನವೆಷ್ಟು;	ಕಳೆದ ಎರಡು ವರ್ಷಗಳಲ್ಲಿ ಮೂಲಭೂತ ಸೌಕರ್ಯಗಳಿಗಾಗಿ ಯಾವುದೇಅನುದಾನ ಬಿಡುಗಡೆಯಾಗಿರುವುದಿಲ್ಲ.
ಈ)	ಸದರಿ ಠಾಣೆಗಳಿಗೆ ಒದಗಿಸಲಾದ ಅಗ್ನಿಶಾಮಕ ವಾಹನಗಳ ಸಂಖ್ಯೆ ಎಷ್ಟು; ಅವುಗಳು ಯಾವ ವರ್ಷದಲ್ಲಿ ತಯಾರಾದ ವಾಹನಗಳಾಗಿರುತ್ತವೆ; (ವಿವರಗಳನ್ನು ನೀಡುವುದು)	**ಯಲಬುರ್ಗಾ ಅಗ್ನಿಶಾಮಕ ಠಾಣೆ: 01–ಜಲವಾಹನ** ವಾಹನಗಳ ಮಾದರಿ / ನೊಂದಣಿ ಸಂಖ್ಯೆ / ತಯಾರಾದ ವರ್ಷ ಜಲವಾಹನ / ಕೆಎ 42 ಜಿ 0989 / 2013 **ಕುಕನೂರುಅಗ್ನಿಶಾಮಕಠಾಣೆ: 02–ಜಲವಾಹನ** ವಾಹನಗಳ ಮಾದರಿ / ನೊಂದಣಿ ಸಂಖ್ಯೆ / ತಯಾರಾದ ವರ್ಷ ಜಲವಾಹನ / ಕೆಎ 01 ಜಿ 42 / 1986 ಜಲವಾಹನ / ಕೆಎ 01 ಜಿ 8113 / 1992

ಉ)	ಠಾಣೆಗಳಲ್ಲಿರುವ ಅಗ್ನಿಶಾಮಕ ವಾಹನಗಳು ಅತ್ಯಂತ ಹಳೆಯದಾಗಿದ್ದು, ತುರ್ತು ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಅಲ್ಲಿರುವ ಸಿಬ್ಬಂದಿಗಳು ಕಷ್ಟ ಪಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಹೊಸ ವಾಹನಗಳನ್ನು ಪೂರೈಕೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?	**ಕುಕನೂರು ಅಗ್ನಿಶಾಮಕ ಠಾಣೆ : 02–ಜಲವಾಹನ** 1. ಕೆಎ 01 ಜಿ 42, – 1986. 2. ಕೆಎ 01 ಜಿ 8113 – 1992. ಸದರಿ ಜಲವಾಹನಗಳು ಹಳೆಯದಾಗಿದ್ದರೂ ಸಹ ಸಮಯಕ್ಕೆ ಸರಿಯಾಗಿ ದುರಸ್ಥಿ ಮಾಡಿಸಿ ಸುಸ್ಥಿತಿಯಲ್ಲಿ ನಿರ್ವಹಣೆ ಮಾಡಲಾಗಿದೆ ಹಾಗೂ ಅಗ್ನಿಕರೆ, ರಕ್ಷಣಾ ಕರೆಗಳಲ್ಲಿ ಏನೂ ತೊಂದರೆಯಾಗದೆ ಕರ್ತವ್ಯ ನಿರ್ವಹಿಸಲಾಗುತ್ತಿದೆ ಹಾಗೂ ಹೊಸ ಜಲವಾಹನಗಳ ಅವಶ್ಯಕತೆಯಿರುವ ಹಿನ್ನೆಲೆಯಲ್ಲಿ 42 ಆಧುನಿಕ ಜಲವಾಹನಗಳನ್ನು ಖರೀದಿಸುವ ಪ್ರಸ್ತಾವನೆಯನ್ನು ಪರಿಶೀಲಿಸಲಾಗುತ್ತಿದೆ.

ಸಂಖ್ಯೆ: ಒಇ 221 ಎಸ್‌ಎಫ್‌ಬಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

(19)

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1352

ಮಾನ್ಯ ಸದಸ್ಯರ ಹೆಸರು : ಡಾ|| ಭರತ್ ಶೆಟ್ಟಿ ವೈ. (ಮಂಗಳೂರು ನಗರ ಉತ್ತರ)

ಉತ್ತರಿಸುವ ದಿನಾಂಕ : 15.12.2020

ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹೊಸ ಪಿಂಚಣಿ ಯೋಜನೆಯಡಿ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ಹಳೆಯ ಪಿಂಚಣಿ ವ್ಯವಸ್ಥೆಯನ್ನು ಜಾರಿಗೊಳಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;	ನೂತನ ಪಿಂಚಣಿ ಯೋಜನೆಗೆ ಸೂಕ್ತ ಬದಲಾವಣೆ / ಮಾರ್ಪಾಡು ಮಾಡಲು ಸರ್ಕಾರದ ಆದೇಶ ಸಂಖ್ಯೆ: ಆಇ 107 ಪಿ.ಇ.ಎನ್. 2018, ದಿನಾಂಕ: 11.12.2018 ರಲ್ಲಿ ಅಧಿಕಾರಿಗಳ ಸಮಿತಿಯನ್ನು ರಚಿಸಲಾಗಿದೆ.
ಆ)	ಹಾಗಿದ್ದಲ್ಲಿ, ಸದರಿ ಪ್ರಸ್ತಾವನೆಯು ಪ್ರಸ್ತುತ ಯಾವ ಹಂತದಲ್ಲಿದೆ; ಈ ಬಗ್ಗೆ ಕೈಗೊಂಡಿರುವ ಕ್ರಮದ ವಿವರ ಒದಗಿಸುವುದು.	ಸದರಿ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಆಇ 135 ಪಿಇಎನ್ 2020

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 967

ಮಾನ್ಯ ಸದಸ್ಯರ ಹೆಸರು : ಶ್ರೀ ಮಹದೇವ ಕೆ. (ಪಿರಿಯಾಪಟ್ಟಣ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಪರಿಸರ ಮತ್ತು ಜೀವಿಶಾಸ್ತ್ರ, ಸಚಿವರು.

ಉತ್ತರಿಸುವ ದಿನಾಂಕ : 15-12-2020.

ಕ್ರ. ಸಂ	ಪ್ರಶ್ನೆ	ಉತ್ತರ
ಅ)	2018-19 ಮತ್ತು 2019-20ನೇ ಸಾಲಿನಲ್ಲಿ ಪಿರಿಯಾಪಟ್ಟಣ ಮತಕ್ಷೇತ್ರಕ್ಕೆ ಮಂಜೂರಾಗಿರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಯ ಅಂದಾಜು ಪಟ್ಟಿಯು ಸಿದ್ಧವಾಗಿ ಆಡಳಿತಾತ್ಮಕ ಅನುಮೋದನೆಯು ಇದುವರೆವಿಗೆ ಮಂಜೂರು ಆಗದಿರಲು ಕಾರಣವೇನು;	ಪಿರಿಯಾಪಟ್ಟಣ ತಾಲ್ಲೂಕಿಗೆ 2018-19ನೇ ಸಾಲಿನಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ. 1. ಪಿರಿಯಾಪಟ್ಟಣ ತಾಲ್ಲೂಕು ರಾವಂದೂರು ಮಠದ ಬಳಿ ಪ್ರವಾಸಿ ಮೂಲಭೂತ ಸೌಕರ್ಯ ಅಭಿವೃದ್ಧಿಪಡಿಸುವ ಕಾಮಗಾರಿ ರೂ.25.00 ಲಕ್ಷ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಕಾಮಗಾರಿ ಪ್ರಗತಿಯಲ್ಲಿದೆ. 2. ಪಿರಿಯಾಪಟ್ಟಣ ನಗರದ ಮಧ್ಯಭಾಗದಲ್ಲಿರುವ ಮಲ್ಲಹಳ್ಳಿ ಅರಸೀಕೆರೆಯನ್ನು ಪ್ರವಾಸಿ ಕ್ಷೇತ್ರವನ್ನಾಗಿ ಅಭಿವೃದ್ಧಿ ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರದ ಅನುಮೋದನೆ ನೀಡಲಾಗಿದ್ದು, ಈ ಕಾಮಗಾರಿಯು ಪ್ರಾರಂಭಿಸದಿರುವ ಕಾರಣದಿಂದಾಗಿ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/190/ಟಿಡಿಪಿ/2020, ದಿನಾಂಕ:07-09-2020ರಂದು ಈ ಕಾಮಗಾರಿಯನ್ನು ರದ್ದುಪಡಿಸಲಾಗಿದೆ. 3. ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಯಾತ್ರಿನಿವಾಸ ನಿರ್ಮಾಣ ಕಾಮಗಾರಿಗೆ ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿಯನ್ನು ಪ್ರಾರಂಭಿಸದಿರುವ ಕಾರಣದಿಂದಾಗಿ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/190/ಟಿಡಿಪಿ/2020, ದಿನಾಂಕ:07-09-2020ರಂದು ಈ ಕಾಮಗಾರಿಯನ್ನು ರದ್ದುಪಡಿಸಲಾಗಿದೆ. 4. ಪಿರಿಯಾಪಟ್ಟಣ ನಗರದ ಶ್ರೀ ಕ್ಷೇತ್ರ ಮಸಣೀಕಮ್ಮ ಅದಿಶಕ್ತಿ ದೇವಸ್ಥಾನದ (ಪಿರಿಯಪಟ್ಟದಮ್ಮ) ಜೀರ್ಣೋದ್ಧಾರ (ಯಾತ್ರಿನಿವಾಸ) ಕಾಮಗಾರಿಗೆ ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಲಾಗಿತ್ತು. ಈ ಕಾಮಗಾರಿಯು ಪ್ರಾರಂಭಿಸದಿರುವ ಕಾರಣದಿಂದಾಗಿ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/190/ಟಿಡಿಪಿ/2020, ದಿನಾಂಕ:07-09-2020ರಂದು ಈ ಕಾಮಗಾರಿಯನ್ನು ರದ್ದುಪಡಿಸಲಾಗಿದೆ.

ಕ್ರ. ಸಂ	ಪ್ರಶ್ನೆ	ಉತ್ತರ
		ಪಿರಿಯಾಪಟ್ಟಣ ತಾಲ್ಲೂಕಿಗೆ 2019-20ನೇ ಸಾಲಿನಲ್ಲಿ ಮಂಜೂರಾಗಿರುವ ಕಾಮಗಾರಿಗಳ ವಿವರ ಈ ಕೆಳಕಂಡಂತಿದೆ. 1. ಪಿರಿಯಾಪಟ್ಟಣ ತಾಲ್ಲೂಕಿನ ಚಿಟ್ಟನಹಳ್ಳಿ ಗ್ರಾಮದ ಶ್ರೀ ಬಸವೇಶ್ವರ ದೇವಸ್ಥಾನದ ಪ್ರವಾಸಿ ಸ್ಥಳದ ಮೂಲಭೂತ ಸೌಕರ್ಯ ನಿರ್ಮಾಣ ಕಾಮಗಾರಿಗೆ ರೂ.25.00 ಲಕ್ಷ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. 2. ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರದ ಕನ್ನಡ ಮಠದ ಬಳಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾಮಗಾರಿಗೆ ರೂ.25.00 ಲಕ್ಷ ಅಂದಾಜುಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದ್ದು, ಸದರಿ ಕಾಮಗಾರಿ ಪ್ರಗತಿಯಲ್ಲಿರುತ್ತದೆ. 3. ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟಕ್ಕೆ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ ಕಾಮಗಾರಿಯನ್ನು ರೂ.200.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ಕೈಗೊಳ್ಳಲು ಸರ್ಕಾರವು ಅನುಮೋದನೆ ನೀಡಲಾಗಿತ್ತು. ಈ ಕಾಮಗಾರಿಗೆ ದಿನಾಂಕ: 16-03-2020 ರಂದು ಆಡಳಿತಾತ್ಮಕ ಅನುಮೋದನೆ ನೀಡಿ, ರೂ.150.00 ಲಕ್ಷಗಳನ್ನು ಕೆಆರ್ ಐಡಿಎಲ್ ಸಂಸ್ಥೆಗೆ ಬಿಡುಗಡೆ ಮಾಡಲಾಗಿದ್ದು, ಸದರಿ ಕಾಮಗಾರಿ ನಿರ್ವಹಿಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮತ್ತು ಅರಣ್ಯ ಇಲಾಖೆ ರವರು ಅನುಮತಿ ನೀಡದೇ ಇರುವುದರಿಂದ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ.
ಆ)	ಈ ಮತಕ್ಷೇತ್ರದ ಪ್ರಸಿದ್ಧ ಶ್ರೀ ಮಸಣೀಕಮ್ಮ ದೇವಸ್ಥಾನ ಪ್ರವಾಸಿ ಸ್ಥಳದ ಅಭಿವೃದ್ಧಿಗೆ 2018-19ನೇ ಸಾಲಿನಲ್ಲಿ ಅನುದಾನ ಮಂಜೂರಾಗಿದ್ದರೂ ಯಾವುದೇ; ಅಭಿವೃದ್ಧಿ ಕಾಮಗಾರಿ ಪ್ರಾರಂಭವಾಗದಿರಲು ಕಾರಣವೇನು;	ಈ ಕಾಮಗಾರಿಯನ್ನು ಪ್ರಾರಂಭಿದಿರುವ ಕಾರಣದಿಂದಾಗಿ ಸರ್ಕಾರದ ಆದೇಶ ಸಂಖ್ಯೆ: ಟಿಓಆರ್/190/ಟಿಡಿಪಿ/2020, ಬೆಂಗಳೂರು ದಿನಾಂಕ:07-09-2020ರಂದು ಈ ಕಾಮಗಾರಿಯನ್ನು ರದ್ದುಪಡಿ ಸಲಾಗಿದೆ.

ಕ್ರ. ಸಂ	ಪ್ರಶ್ನೆ	ಉತ್ತರ
ಇ)	ಈ ಮತಕ್ಷೇತ್ರಕ್ಕೆ 2019-20ನೇ ಸಾಲಿನಲ್ಲಿ ಮಂಜೂರಾಗಿರುವ ಪ್ರವಾಸಿ ಸ್ಥಳಗಳ ಅಭಿವೃದ್ಧಿಯ ಕಾಮಗಾರಿಗಳು ಪ್ರಾರಂಭವಾಗದಿರಲು ಕಾರಣವೇನು;	2019-20ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಪಿರಿಯಾಪಟ್ಟಣ ತಾಲ್ಲೂಕು ಬೆಟ್ಟದಪುರ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟಕ್ಕೆ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಮತ್ತು ಅರಣ್ಯ ಇಲಾಖೆರವರು ಅನುಮತಿ ನೀಡದೇ ಇರುವುದರಿಂದ ಕಾಮಗಾರಿಯು ಪ್ರಾರಂಭವಾಗಿರುವುದಿಲ್ಲ.
ಈ)	ಸದರಿ ಮತಕ್ಷೇತ್ರದ ಪ್ರವಾಸಿ ಸ್ಥಳಗಳ ಅಭಿವೃದ್ಧಿಯ ದೃಷ್ಟಿಯಿಂದ ಮಂಜೂರಾಗಿರುವ ಕಾಮಗಾರಿಗಳನ್ನು ಕೂಡಲೇ ಪ್ರಾರಂಭ ಮಾಡಲು ಸರ್ಕಾರದ ಸೂಕ್ತ ಕ್ರಮವೇನು?	ಮಾನ್ಯ ಶಾಸಕರ ಪರಿಷ್ಕೃತ ಪ್ರಸ್ತಾವನೆಯನ್ವಯ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಟ್ಟಕ್ಕೆ ರಸ್ತೆ ನಿರ್ಮಾಣ, ಚರಂಡಿ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಸಂಖ್ಯೆ: ಟಿಓಆರ್ 274 ಟಿಡಿವಿ 2020

(ಸಿ. ಪಿ. ಯೋಗೇಶ್ವರ)
ಪ್ರವಾಸೋದ್ಯಮ, ಪರಿಸರ ಮತ್ತು
ಜೀವಿಶಾಸ್ತ್ರ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 453

ಮಾನ್ಯ ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ. ಎಸ್. (ಸೊರಬ)

ಉತ್ತರಿಸುವ ಸಚಿವರು : ಪ್ರವಾಸೋದ್ಯಮ ಮತ್ತು ಪರಿಸರ ಹಾಗೂ ಜೀವಿಶಾಸ್ತ್ರ ಸಚಿವರು

ಉತ್ತರಿಸುವ ದಿನಾಂಕ : 15-12-2020.

****

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ನಂಜುಂಡಪ್ಪ ವರದಿಯ ಪ್ರಕಾರ ಹಿಂದುಳಿದ ತಾಲ್ಲೂಕಾಗಿರುವ ಸೊರಬ ತಾಲ್ಲೂಕಿನಲ್ಲಿರುವ ಗುಡವಿ ಪಕ್ಷಿಧಾಮವು ರಾಜ್ಯದ ಹಾಗೂ ನಮ್ಮ ದೇಶದ ಪ್ರಮುಖ ಪಕ್ಷಿಧಾಮಗಳೊಲ್ಲೊಂದಾಗಿದ್ದು, ಸದರಿ ಪಕ್ಷಿಧಾಮವನ್ನು ಅಭಿವೃದ್ಧಿ ಪಡಿಸುವ ಯೋಜನೆಯನ್ನು ಸರಕಾರ ಹೊಂದಿದೆಯೇ;	ಪ್ರವಾಸೋದ್ಯಮ ಇಲಾಖೆಯಿಂದ 2008-09ನೇ ಸಾಲಿನಲ್ಲಿ ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಗುಡುವಿ ಪಕ್ಷಿಧಾಮ ಅಭಿವೃದ್ಧಿ ಕಾಮಗಾರಿಯನ್ನು (ವಿಶೇಷ ಅಭಿವೃದ್ಧಿ ಯೋಜನೆ) ಅಡಿ ರೂ.50.00 ಲಕ್ಷಗಳಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ವನ್ಯಜೀವಿ ವಿಭಾಗ, ಶಿವಮೊಗ್ಗರವರ ಮೂಲಕ ಅನುಷ್ಠಾನಗೊಳಿಸಿ ಈಗಾಗಲೇ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ.
ಆ)	ಹಾಗಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈ ಪಕ್ಷಿಧಾಮವನ್ನು ಅಭಿವೃದ್ಧಿಪಡಿಸಲು ಅನುದಾನ ಬಿಡುಗಡೆ ಮಾಡಲಾಗುವುದೇ?	ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಬಂಡವಾಳ ವೆಚ್ಚಗಳ ಲೆಕ್ಕಶೀರ್ಷಿಕೆ ಅಡಿಯಲ್ಲಿ ರೂ.35.00ಕೋಟಿ ಅನುದಾನ ಮಾತ್ರ ಒದಗಿಸಿದ್ದು, ಇಲಾಖೆಯ ಮುಂದುವರೆದ ಕಾಮಗಾರಿಗಳಿಗೆ ಈ ಅನುದಾನವನ್ನು ವಿನಿಯೋಗಿಸಬೇಕಾಗಿದ್ದು, ಪ್ರಸ್ತುತ ಸಾಲಿನಲ್ಲಿ ಈ ಯೋಜನೆಗೆ ಬಿಡುಗಡೆಗೊಳಿಸಲು ಸಾಧ್ಯವಾಗುವುದಿಲ್ಲ.

ಸಂಖ್ಯೆ: ಟಿಓಆರ್ 263 ಟಿಡಿವಿ 2020

(ಸಿ.ಪಿ.ಯೋಗೇಶ್ವರ)
ಪ್ರವಾಸೋದ್ಯಮ ಮತ್ತು ಪರಿಸರ
ಹಾಗೂ ಜೀವಿಶಾಸ್ತ್ರ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1444

2) ಮಾನ್ಯ ಸದಸ್ಯರ ಹೆಸರು : ಶ್ರೀ ಶ್ರೀನಿವಾಸಮೂರ್ತಿ.ಕೆ. ಡಾ॥ (ನೆಲಮಂಗಲ)

3) ಉತ್ತರಿಸುವ ದಿನಾಂಕ : 15/12/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಯಾವ ಯಾವ ಠಾಣೆಗಳು ಕಾರ್ಯನಿರ್ವಹಿಸುತ್ತಿವೆ ;</td><td>ನೆಲಮಂಗಲ ವಿಧಾನಸಭಾ ಕ್ಷೇತ್ರದಲ್ಲಿ ಇರುವ ಪೊಲೀಸ್ ಠಾಣೆಗಳ ಸಂಖ್ಯೆ–05
<u>ವಿವರಗಳು</u>
1) ನೆಲಮಂಗಲ ಪುರ ಪೊಲೀಸ್ ಠಾಣೆ
2) ನೆಲಮಂಗಲ ಗ್ರಾಮಾಂತರ ಪೊಲೀಸ್ ಠಾಣೆ
3) ನೆಲಮಂಗಲ ಸಂಚಾರ ಪೊಲೀಸ್ ಠಾಣೆ
4) ದಾಬಸ್‌ಪೇಟೆ ಪೊಲೀಸ್ ಠಾಣೆ
5) ತ್ಯಾಮಗೊಂಡ್ಲು ಪೊಲೀಸ್ ಠಾಣೆ</td></tr>
<tr><td>ಆ)</td><td>ಹೊಸ ಪೊಲೀಸ್ ಠಾಣೆಗಳ ನಿರ್ಮಾಣ ಮಾಡಲು ಇರುವ ಮಾನದಂಡಗಳೇನು ;</td><td>ಹೊಸ ಪೊಲೀಸ್ ಠಾಣೆಗಳ ನಿರ್ಮಾಣ ಮಾಡಲು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯನ್ವಯವಿರುವ ಮಾನದಂಡಗಳ ವಿವರ ಈ ಕೆಳಗಿನಂತಿದೆ.<table><tr><td>Creation of new Police Stations with PSI</td><td>1) 75 miles/150 Sq.km.area
2) 300 No. of crimes per year
3) 50,000 to 60,000 population (as per evident of census)</td></tr></table></td></tr>
<tr><td>ಇ)</td><td>ನೆಲಮಂಗಲ ವಿಧಾನಸಭಾ ಕ್ಷೇತ್ರಕ್ಕೆ ಪ್ರತ್ಯೇಕ ಮಹಿಳಾ ಪೊಲೀಸ್ ಠಾಣೆ ನಿರ್ಮಾಣ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯಲ್ಲಿ ಮಂಜೂರಾತಿ ನೀಡಲಾಗುವುದು ; (ರಾಜ್ಯದಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳ ವಿವರ ಇದರ ಅಭಿವೃದ್ಧಿಗೆ ಮಂಜೂರು ಮಾಡಲಾದ ಅನುದಾನದ ಆದೇಶದೊಂದಿಗೆ ವಿವರ ನೀಡುವುದು)</td><td>ಬೆಂಗಳೂರು ವಲಯ ಜಿಲ್ಲೆಯ ಕಾರ್ಯ ವ್ಯಾಪ್ತಿಯಲ್ಲಿನ ಮಹಿಳೆಯರು ನೀಡುತ್ತಿರುವ ದೂರುಗಳನ್ನು ಮಹಿಳಾ ಪೊಲೀಸ್ ಠಾಣೆ ದೊಡ್ಡಬಳ್ಳಾಪುರದಲ್ಲಿ ದಾಖಲಿಸಲಾಗುತ್ತಿದೆ.
ರಾಜ್ಯದಲ್ಲಿ ಒಟ್ಟು 36 ಮಹಿಳಾ ಪೊಲೀಸ್ ಠಾಣೆಗಳು ಕಾರ್ಯನಿರ್ವಹಿಸುತ್ತಿದೆ.
ರಾಜ್ಯದಲ್ಲಿರುವ ಮಹಿಳಾ ಪೊಲೀಸ್ ಠಾಣೆಗಳ ಅಭಿವೃದ್ಧಿಗೆ ಮಂಜೂರು ಮಾಡಲಾದ ಅನುದಾನ ವಿವರ ಕೆಳಗಿನಂತಿದೆ.<table><tr><th>ಕ್ರ ಸಂ</th><th>ವಿಷಯ</th><th>ವರ್ಷ</th><th>ಮೊತ್ತ</th></tr><tr><td>1.</td><td>ರಾಜ್ಯದ ವಿವಿಧ ಸ್ಥಳಗಳಲ್ಲಿ ಪೊಲೀಸ್ ಕಛೇರಿ/ಠಾಣೆಗಳಲ್ಲಿ ಮಹಿಳಾ ಶೌಚಾಲಯ ಕಾಮಗಾರಿಗೆ

ಸಂಬಂಧಿಸಿದಂತೆ ಅನುದಾನ ಬಿಡುಗಡೆ ಮಾಡುವ ಬಗ್ಗೆ</td><td>2017–18
2018–19
2019–20
ಒಟ್ಟು</td><td>470.40
0.00
200.00
670.40</td></tr></table></td></tr>
</table>

		2.	ರಾಜ್ಯದ ಎಲ್ಲಾ ಮಹಿಳಾ ಪೊಲೀಸ್ ಠಾಣೆಗಳನ್ನು ಒನ್‌ಸ್ಟಾಪ್ ಸರ್ವಿಸ್ ಸೆಂಟರ್ ಆಗಿ ಮೇಲ್ದರ್ಜೆಗೇರಿಸುವ ಕುರಿತು	2020-21	438.00
		3.	ನಿರ್ಭಯಾ ಯೋಜನೆಯಡಿ ರಾಜ್ಯದ ಪೊಲೀಸ್ ಠಾಣೆಗಳಲ್ಲಿ ಮಹಿಳಾ ಹೆಲ್ಪ್ ಡೆಸ್ಕ್‌ಗಳ ಸ್ಥಾಪನೆ/ಬಲವರ್ಧನೆಗೆ ಅನುದಾನ ಬಿಡುಗಡೆ ಕುರಿತು	2020-21	700.00

ಈ)	ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸೋಂಪುರ (ದಾಬಸ್‌ಪೇಟೆ) ಯಲ್ಲಿ ನೂತನವಾಗಿ ಟ್ರಾಫಿಕ್ ಪೊಲೀಸ್ ಠಾಣೆಯನ್ನು ನಿರ್ಮಾಣ ಮಾಡಲು ಸರ್ಕಾರ ಪ್ರಸಕ್ತ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವುದೇ ; ದಾಬಸ್‌ಪೇಟೆಯಲ್ಲಿ ಎರಡು ಪ್ರಮುಖ ರಾಷ್ಟ್ರೀಯ ಹೆದ್ದಾರಿಗಳು ಹಾದು ಹೋಗುವುದರಿಂದ ಪ್ರತಿನಿತ್ಯ ವಾಹನ ದಟ್ಟಣೆ ಹಾಗೂ ಜನದಟ್ಟಣೆಯಿಂದ ಕೂಡಿದ್ದು ಇಲ್ಲಿ ಟ್ರಾಫಿಕ್ ಪೊಲೀಸ್ ಠಾಣೆ ಅವಶ್ಯಕತೆ ಇದ್ದು ಇದರ ಮಂಜೂರಾತಿಗೆ ರಾಜ್ಯ ಸರ್ಕಾರ ಕ್ರಮ ಕೈಗೊಳ್ಳುವುದೇ ;	ನೆಲಮಂಗಲ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಸೋಂಪುರ (ದಾಬಸ್‌ಪೇಟೆ)ಯನ್ನು ಒಳಗೊಂಡಂತೆ ಈಗಾಗಲೇ ನೆಲಮಂಗಲ ಸಂಚಾರ ಪೊಲೀಸ್ ಠಾಣೆಯು ಕಾರ್ಯ ನಿರ್ವಹಿಸುತ್ತಿದೆ.
ಉ)	ನೆಲಮಂಗಲ ಪೊಲೀಸ್ ಠಾಣೆಗಳ ಕಟ್ಟಡಗಳ ಅಭಿವೃದ್ಧಿ ಕಾಮಗಾರಿಗೆ ಹಾಗೂ ಪೊಲೀಸ್ ವಸತಿ ಕೇಂದ್ರಗಳ ಅಭಿವೃದ್ಧಿಗೆ ಸರ್ಕಾರ ಪ್ರಸಕ್ತ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡುವುದೇ ;	ಪೊಲೀಸ್ ಗೃಹ 2020 ಯೋಜನೆಯಡಿ ಹಂತ-3ರಲ್ಲಿ ನೆಲಮಂಗಲ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಒಟ್ಟು 08 ಎಸ್.ಐ ಮತ್ತು 24 ಪಿಸಿ ವಸತಿಗೃಹಗಳನ್ನು ನಿರ್ಮಿಸಲಾಗಿದೆ. ನೆಲಮಂಗಲ ವಿಧಾನಸಭಾ ಕ್ಷೇತ್ರದ ಪೊಲೀಸ್ ಠಾಣೆಗಳ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಿಂದ ಯಾವುದೇ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.
ಊ)	ನೆಲಮಂಗಲ ವಿಧಾನಸಭಾ ಕ್ಷೇತ್ರದ ಪೊಲೀಸ್ ಠಾಣೆಗಳ ಅಭಿವೃದ್ಧಿಗೆ ಕಳೆದ ಮೂರು ವರ್ಷಗಳಿಂದ ನೀಡಿದ ಅನುದಾನವೆಷ್ಟು ?	

ಸಂಖ್ಯೆ: ಹೆಚ್‌ಡಿ 141 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1907

2] ಮಾನ್ಯ ಸದಸ್ಯರ ಹೆಸರು : ಶ್ರೀ ರೇವಣ್ಣ ಹೆಚ್.ಡಿ.(ಹೊಳೇನರಸೀಪುರ)

3] ಉತ್ತರಿಸುವ ದಿನಾಂಕ : 29.09.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಹೊಳೇನರಸೀಪುರ ತಾಲ್ಲೂಕಿನಲ್ಲಿ ಡಿ.ವೈ.ಎಸ್.ಪಿ ಕಛೇರಿ, ಸರ್ಕಲ್ ಇನ್ಸ್ ಪೆಕ್ಟರ್ ಕಛೇರಿ, ಹೊಳೇನರಸೀಪುರ ಟೌನ್ ಪೊಲೀಸ್ ಠಾಣೆ, ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ಹಳ್ಳಿ ಮೈಸೂರು ಪೊಲೀಸ್ ಠಾಣೆಗಳಲ್ಲಿ ಡಿ.ವೈ.ಎಸ್.ಪಿ ರವರು, ಸರ್ಕಲ್ ಇನ್ಸ್ ಪೆಕ್ಟರ್ ರವರು ಹಾಗೂ 04 ಜನ ಸಬ್ ಇನ್ಸ್ ಪೆಕ್ಟರ್ ರವರುಗಳು ಸೇರಿ ಸುಮಾರು 150ಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಅವಶ್ಯಕವಿರುವ ಪೊಲೀಸ್ ವಸತಿಗೃಹಗಳಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು. ಹೊಳೆನರಸೀಪುರ ವಿಧಾನ ಸಭಾ ಕ್ಷೇತ್ರದಲ್ಲಿ ಡಿವೈಎಸ್‌ಪಿ ಕಛೇರಿ, ವೃತ್ತ ಕಛೇರಿ, ಹೊಳೆನರಸೀಪುರ ನಗರ ಮತ್ತು ಗ್ರಾಮಾಂತರ ಠಾಣೆಗಳು ಬರುತ್ತವೆ ಸದರಿ ಕಛೇರಿ ಮತ್ತು ಠಾಣೆಗಳಲ್ಲಿನ ಮಂಜೂರಾತಿ ಬಲ, ವಾಸ್ತವಿಕ ಬಲ ಮತ್ತು ವಸತಿಗೃಹಗಳ ಮಾಹಿತಿ ಈ ಕೆಳಕಂಡಂತಿದೆ
	ಹೊಳೇನರಸೀಪುರ ನಗರದಲ್ಲಿ ಸುಮಾರು 60 ವರ್ಷಗಳ ಹಿಂದೆ ನಿರ್ಮಿಸಿದ ಪೊಲೀಸ್ ವಸತಿಗೃಹಗಳ ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	(ಕೆಳಗಿನ ಕೋಷ್ಟಕ ನೋಡಿ) ಹೊಳೆನರಸೀಪುರ ಪೊಲೀಸ್ ಠಾಣಾ ವ್ಯಾಪ್ತಿಯ ರಿವರ್ ಬ್ಯಾಂಕ್ ರಸ್ತೆಯಲ್ಲಿರುವ 08 ವಸತಿಗೃಹಗಳು ಮತ್ತು ಹಾಸನ-ಮೈಸೂರು ರಸ್ತೆಯಲ್ಲಿರುವ 15 ವಸತಿ ಗೃಹಗಳನ್ನು ನೆಲಸಮಗೊಳಿಸಲು ಈ ಕಛೇರಿಯ ನಡವಳಿ ಆದೇಶ ದಿನಾಂಕ:28.01.2017 ರಂದು ಅನುಮತಿ ನೀಡಿ ಆದೇಶಿಸಲಾಗಿರುತ್ತದೆ
	ಹಾಗಿದ್ದಲ್ಲಿ, ಹೊಸ ವಸತಿಗೃಹಗಳನ್ನು ನಿರ್ಮಿಸಿ ಪೊಲೀಸ್ ಇಲಾಖೆಯ ಸಿಬ್ಬಂದಿಗಳಿಗೆ ವಾಸಿಸಲು ಅನುಕೂಲ ಮಾಡಿಕೊಡಲು ಕ್ರಮ ಕೈಗೊಳ್ಳಲಾಗುವುದೇ? (ಸಂಪೂರ್ಣ ಮಾಹಿತಿ ನೀಡುವುದು)	ಪೊಲೀಸ್ ಗೃಹ 2025 ಯೋಜನೆಯಡಿಯಲ್ಲಿ ಹೊಸದಾಗಿ ವಸತಿ ಗೃಹಗಳನ್ನು ನಿರ್ಮಿಸಲು ಅನುದಾನದ ಲಭ್ಯತೆಯನುಸಾರ ಪರಿಶೀಲಿಸಿ ಕ್ರಮವಹಿಸಲಾಗುವುದು.

ಕಛೇರಿ/ ಠಾಣೆ	ಮಂಜೂರಾತಿ ಬಲ	ವಾಸ್ತವಿಕ ಬಲ	ಹಾಲಿ ಇರುವ ವಸತಿ ಗೃಹಗಳ ಸಂಖ್ಯೆ	ವಸತಿ ಗೃಹಗಳ ಕೊರತೆ
ಡಿವೈಎಸ್‌ಪಿ ಕಛೇರಿ.	05	05	23	57
ಸಿಪಿಐ ಕಛೇರಿ	04	03		
ನಗರ ಠಾಣೆ	39	35		
ಗ್ರಾಮಾಂತರ ಠಾಣೆ	32	31		
ಒಟ್ಟು	80	74	23	57

ಸಂಖ್ಯೆ: ಹೆಚ್ ಡಿ 90 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]

ಮಾನ್ಯ ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 753

2] ಮಾನ್ಯ ಸದಸ್ಯರ ಹೆಸರು : ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ)

3] ಉತ್ತರಿಸುವ ದಿನಾಂಕ : 29.09.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಅಫಜಲ್ ಪುರ ಮತಕ್ಷೇತ್ರದ ಫರಹತಾಬಾದ ಹಾಗೂ ಅಫಜಲ್ ಪುರ ಪೊಲೀಸ್ ಠಾಣೆಗಳ ಕಟ್ಟಡವು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲಬುರಗಿ ನಗರದ ಫರತಾಬಾದ್ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ದಿನಾಂಕ:02.11.2020 ರಂದು ಅನುಮತಿ ನೀಡಿ ಆದೇಶ ಹೊರಡಿಸಲಾಗಿದೆ. ಅಫಜಲ್‌ಪುರ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ ಕುರಿತು ಅನುದಾನದ ಲಭ್ಯತೆಯ ಅನುಸಾರ ಕ್ರಮಕೈಗೊಳ್ಳಲಾಗುವುದು.
ಆ)	ಹಾಗಿದ್ದಲ್ಲಿ, ಇಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	
ಇ)	ಈ ಪೊಲೀಸ್ ಠಾಣೆಗಳ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡಲು ಪ್ರಸಾವನೆಯು ಸರ್ಕಾರಕ್ಕೆ ಸಲ್ಲಿಸಿದ್ದು ಯಾವ ಕಾಲಮಿತಿಯೊಳಗೆ ಮಂಜೂರು ಮಾಡಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಹೆಚ್ ಡಿ 87 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ , ಕಾನೂನು ಮತ್ತು ಸಂಸದಿಯ
ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 648

2) ಮಾನ್ಯ ಸದಸ್ಯರ ಹೆಸರು : ಶ್ರೀಮತಿ ಅಂಜಲಿ ಹೇಮಂತ್ ನಿಂಬಾಳ್ಕರ್ ಡಾ॥ (ಖಾನಾಪುರ)

3) ಉತ್ತರಿಸುವ ದಿನಾಂಕ : 29/09/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳಸಾ-ಬಂಡೂರಿ ಯೋಜನಾ ಪ್ರದೇಶ ಮತ್ತು ಗೋವಾ ರಾಜ್ಯದಿಂದ ಕರ್ನಾಟಕಕ್ಕೆ ಪ್ರವೇಶಿಸುವ ಪ್ರಮುಖ ದ್ವಾರವಾದ ಖಾನಾಪುರ ತಾಲ್ಲೂಕಿನ ಕಣಕುಂಬಿ ಗ್ರಾಮದಲ್ಲಿ ಪೊಲೀಸ್ ಹೊರಠಾಣೆ ನಿರ್ಮಿಸುವ ಪ್ರಸ್ತಾವನೆಯನ್ನು ತಿರಸ್ಕರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಹೌದು.
ಆ)	ಪ್ರತಿನಿತ್ಯ ಗೋವಾದಿಂದ ಸರಬರಾಜಾಗುವ ಅಕ್ರಮ ಮದ್ಯವನ್ನು ತಡೆಗಟ್ಟುವಲ್ಲಿ ಮತ್ತು ಕಣಕುಂಬಿ ಸುತ್ತಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಭೇಟಿ ನೀಡುವ ಪುಂಡರ ಪುಂಡಾಟಿಕೆ ತಡೆಯಲು ಸರ್ಕಾರವು ಯಾವ ಕ್ರಮಗಳನ್ನು ಜರುಗಿಸಲಿದೆ ;	ಪ್ರತಿ ನಿತ್ಯ ಗೋವಾದಿಂದ ಸರಬರಾಜಾಗುವ ಅಕ್ರಮ ಮದ್ಯವನ್ನು ತಡೆಗಟ್ಟುವಲ್ಲಿ ಧಾರವಾಡ ಜಿಲ್ಲಾ ಅಳ್ನಾವರ ಪೊಲೀಸ್ ಠಾಣಾ ವ್ಯಾಪ್ತಿಯ ಕಡಬಗಟ್ಟಿ ಕ್ರಾಸ್‌ನಲ್ಲಿ ಚೆಕ್‌ಪೋಸ್ಟ್ ತೆರೆದು ವಾಹನಗಳನ್ನು ಪರಿಶೀಲನೆ ಮಾಡಿ ನಿಗಾವಹಿಸಲಾಗಿದೆ ಮತ್ತು ಅಕ್ರಮ ಮದ್ಯವನ್ನು ಸಾಗಾಟ ಮಾಡುವಾಗ ಪತ್ತೆಯಾದಲ್ಲಿ ಅಂತಹವರ ವಿರುದ್ಧ ಕರ್ನಾಟಕ ಅಬಕಾರಿ ಕಾಯಿದೆ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು. ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ವ್ಯಾಪ್ತಿಗೆ ಒಳಪಡುವ ಕಣಕುಂಬಿ ಸುತ್ತ ಮುತ್ತಲಿನ ಪ್ರವಾಸಿ ಸ್ಥಳಗಳಿಗೆ ಆಗಮಿಸುವ ಪ್ರವಾಸಿಗರು ಪುಂಡಾಟಿಕೆ ಮಾಡಿದಲ್ಲಿ ಅಂತಹವರ ಮೇಲೆ ಸಹ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.
ಇ)	ಇಂತಹ ಪರಿಸ್ಥಿತಿಯಲ್ಲಿ ವಿಶೇಷ ಪ್ರಕರಣವೆಂದು ಪರಿಗಣಿಸಿ ಕಣಕುಂಬಿಯಲ್ಲಿ ಪೊಲೀಸ್ ಹೊರಠಾಣೆ ಸ್ಥಾಪಿಸಲು ಸರ್ಕಾರಕ್ಕೆ ಇರುವ ತೊಂದರೆಗಳೇನು ?	ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಕಣಕುಂಬಿ ಗ್ರಾಮದಲ್ಲಿ ಪೊಲೀಸ್ ಹೊರಠಾಣೆ ತೆರೆಯಲು ರಾಷ್ಟ್ರೀಯ ಪೊಲೀಸ್ ಆಯೋಗದ ಮಾನದಂಡಗಳನ್ನು ಪೂರೈಸಿಲ್ಲವಾದ್ದರಿಂದ, ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿರುತ್ತದೆ.

ಸಂಖ್ಯೆ: ಹೆಚ್‌ಡಿ 113 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1868

2] ಮಾನ್ಯ ಸದಸ್ಯರ ಹೆಸರು : ಶ್ರೀ ಅಶೋಕ ನಾಯಕ್ ಕೆ.ಬಿ (ಶಿವಮೊಗ್ಗ ಗ್ರಾಮಾಂತರ)

3] ಉತ್ತರಿಸುವ ದಿನಾಂಕ : 29.09.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಶಿವಮೊಗ್ಗ ಗ್ರಾಮಾಂತರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮಾಚೇನಹಳ್ಳಿ ಗ್ರಾಮದ ಕೆ.ಎಸ್.ಆರ್.ಪಿ 8ನೇ ಬೆಟಾಲಿಯನ್ ನಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು 8ನೇ ಪಡೆ ಕೆ.ಎಸ್.ಆರ್.ಪಿ, ಶಿವಮೊಗ್ಗ ಘಟಕದ ವಸತಿ ಸಮುಚ್ಚಯ ಪ್ರದೇಶದಲ್ಲಿ ರಸ್ತೆ ಹಾಗೂ ಬಾಕ್ಸ್ ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ರೂ.303.30 ಲಕ್ಷಗಳ ಅನುದಾನ ಅಗತ್ಯವಿದ್ದು, ಅನುದಾನದ ಲಭ್ಯತೆಯ ಅನುಸಾರ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಕ್ರಮಕೈಗೊಳ್ಳಲಾಗುವುದು.
ಆ)	ಬಂದಿದ್ದಲ್ಲಿ, ಸದರಿ ಬೆಟಾಲಿಯನ್ನಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;	
ಇ)	ಇದಕ್ಕಾಗಿ ಬೇಕಾಗುವ ಅನುದಾನವೆಷ್ಟು?	

ಸಂಖ್ಯೆ: ಹೆಚ್ ಡಿ 88 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]

ಗೃಹ / ಕಾನೂನು ಮತ್ತು ಸಂಸದೀಯ

ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1875

2] ಮಾನ್ಯ ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ. ಕೆ.ಎಂ (ಅರಸಿಕೇರೆ)

3] ಉತ್ತರಿಸುವ ದಿನಾಂಕ : 29.09.2020.

4] ಉತ್ತರಿಸುವ ಸಚಿವರು : ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ, ಹೊಳೇನರಸೀಪುರ ತಾಲ್ಲೂಕಿನ ಹೊಳೇನರಸೀಪುರ ವಿಧಾನ ಸಭಾ ಕ್ಷೇತ್ರ ಮತ್ತು ಅರಕಲಗೂಡು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಡಿ.ವೈ.ಎಸ್.ಪಿ ಕಛೇರಿ, ಸರ್ಕಲ್ ಇನ್ಸ್ ಪೆಕ್ಟರ್ ಕಛೇರಿ, ಹೊಳೇನರಸೀಪುರ ಟೌನ್ ಪೊಲೀಸ್ ಠಾಣೆ, ಹೊಳೇನರಸೀಪುರ ಗ್ರಾಮಾಂತರ ಪೊಲೀಸ್ ಠಾಣೆಗಳಲ್ಲಿ ಮತ್ತು ಹಳ್ಳಿ ಮೈಸೂರು ಪೊಲೀಸ್ ಠಾಣೆಗಳಲ್ಲಿ ಡಿ.ವೈ.ಎಸ್.ಪಿ, ಸರ್ಕಲ್, ಇನ್ಸ್ ಪೆಕ್ಟರ್ ಹಾಗೂ 04 ಜನ ಸಬ್ ಇನ್ಸ್ ಪೆಕ್ಟರ್ ಸದರಿ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ಸೇರಿ ಅವಶ್ಯಕವಿರುವ ಪೊಲೀಸ್ ವಸತಿಗೃಹಗಳಿಲ್ಲದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಹೊಳೇನರಸೀಪುರ ನಗರದಲ್ಲಿ ಸುಮಾರು 60 ವರ್ಷಗಳ ಹಿಂದೆ ನಿರ್ಮಿಸಿದ ಪೊಲೀಸ್ ವಸತಿಗೃಹಗಳ ಕಟ್ಟಡಗಳು ಸಂಪೂರ್ಣ ಶಿಥಿಲಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?	ಪೊಲೀಸ್ ಗೃಹ 2025 ಯೋಜನೆಯಡಿ ಮುಂದಿನ 5 ವರ್ಷಗಳಲ್ಲಿ ಹೊಸದಾಗಿ ಸುಮಾರು 10000 ವಸತಿಗೃಹಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಗೆ ಸರ್ಕಾರದ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಸದರಿ ಪ್ರಸ್ತಾವನೆಯನ್ನು ಸಹ ಈ ಯೋಜನೆಯಡಿಯಲ್ಲಿ ಪರಿಗಣಿಸಲಾಗುವುದು.
ಇ)	ಹಾಗಿದ್ದಲ್ಲಿ, ಇಲ್ಲಿ ವಸತಿಗೃಹಗಳ ಕಟ್ಟಡಗಳನ್ನು ನಿರ್ಮಿಸಲು ಈಗಾಗಲೇ ಪೊಲೀಸ್ ಹೌಸಿಂಗ್ ಕಾರ್ಪೋರೇಷನ್ ಮುಖೇನ ಒಟ್ಟು 72 ವಸತಿಗೃಹಗಳಿಗೆ ರೂ.23.46 ಕೋಟಿಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಪ್ರಸ್ತಾವನೆಯನ್ನು ಸಲ್ಲಿಸಲಾಗಿರುವುದು ನಿಜವೇ;	
ಈ)	ಹಾಗಿದ್ದಲ್ಲಿ, ಈ ಪ್ರಸ್ತಾವನೆಗೆ ಮಂಜೂರಾತಿ ನೀಡಿ ಕಾಮಗಾರಿ ಪ್ರಾರಂಭಿಸಿ ಪೂರ್ಣಗೊಳಿಸಿ ಈ ಸಿಬ್ಬಂದಿಗಳಿಗೆ ವಾಸಿಸಲು ಅನುಕೂಲ ಮಾಡಿಕೊಡಲು ಸರ್ಕಾರ ಕ್ರಮ ಕೈಗೊಳ್ಳುವುದೇ (ಸಂಪೂರ್ಣ ಮಾಹಿತಿ ನೀಡುವುದು)?	

ಸಂಖ್ಯೆ: ಹೆಚ್ ಡಿ 89 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]

ಗೃಹ / ಕಾನೂನು ಮತ್ತು ಸಂಸದಿಯ

ವ್ಯವಹಾರಗಳ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1825

2) ಮಾನ್ಯ ಸದಸ್ಯರ ಹೆಸರು : ಶ್ರೀ ಪರಮೇಶ್ವರ್.ಜಿ. ಡಾ॥ (ಕೊರಟಗೆರೆ)

3) ಉತ್ತರಿಸುವ ದಿನಾಂಕ : 29/09/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಕೆ.ಎಸ್.ಆರ್.ಪಿ. ಬೆಟಾಲಿಯನ್ ಮಂಜೂರಾಗಿದ್ದು ಯಾವಾಗ ;	ತುಮಕೂರಿನಲ್ಲಿ ಹೊಸ ಕೆ.ಎಸ್.ಆರ್.ಪಿ. ಪಡೆಯನ್ನು ಸರ್ಕಾರದ ಆದೇಶ ಸಂಖ್ಯೆ: ಹೆಚ್.ಡಿ 123 ಪಿಓಪಿ 2016, ದಿನಾಂಕ:22.03.2017ರ ಆದೇಶದನ್ವಯ ಸ್ಥಾಪನೆಯಾಗಿರುತ್ತದೆ.
ಆ)	ಸದರಿ ಬೆಟಾಲಿಯನ್‌ನ ವಿಸ್ತೀರ್ಣ ಎಷ್ಟು ಮತ್ತು ಅದರ ಮಾನವ ಸಂಪನ್ಮೂಲ ಸಾಮರ್ಥ್ಯದ ಪ್ರಮಾಣ ಎಷ್ಟು ;	ಸದರಿ ಬೆಟಾಲಿಯನ್ 48.36 ಎಕರೆ ವಿಸ್ತೀರ್ಣ ಹೊಂದಿರುತ್ತದೆ ಮತ್ತು ಮಾನವ ಸಂಪನ್ಮೂಲ ಸಾಮರ್ಥ್ಯದ ಪ್ರಮಾಣದ ವಿವರವನ್ನು ಅನುಬಂಧ-1 ರಲ್ಲಿ ಒದಗಿಸಿದೆ.
ಇ)	ಬೆಟಾಲಿಯನ್‌ಗೆ ಮಂಜೂರಾಗಿರುವ ಸಂಪೂರ್ಣ ಜಾಗವು ಬಳಕೆಗೆ ಉಪಯುಕ್ತವಾಗಿದೆಯೇ; ಇಲ್ಲವಾದಲ್ಲಿ ಹೆಚ್ಚುವರಿ ಜಾಗದ ಲಭ್ಯತೆಗೆ ಸರ್ಕಾರ ಯಾವ ಕ್ರಮವನ್ನು ತೆಗೆದುಕೊಂಡಿದೆ ;	ಹೌದು.
ಈ)	ಇಲ್ಲಿಯವರೆಗೂ ಬೆಟಾಲಿಯನ್‌ಗೆ ಸಂಬಂಧಿಸಿದ ಕಾಮಗಾರಿಗಳು ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು ;	ಕಾಮಗಾರಿಗಳನ್ನು ನಿರ್ವಹಿಸುವ ಸಂದರ್ಭದಲ್ಲಿ ಜಮೀನಿನ ಸ್ಥಳಕ್ಕಾಗಿ ಮೂಲ ಮಾಲೀಕರು ಅಡಚಣೆ ಉಂಟು ಮಾಡಿದ್ದು, ಈಗಾಗಲೇ ಅದು ಇತ್ಯರ್ಥವಾಗಿರುತ್ತದೆ ಮತ್ತು ರಾಜ್ಯಾದ್ಯಂತ ಕರೋನದಿಂದ ಲಾಕ್‌ಡೌನ್ ಜಾರಿಯಾದ್ದರಿಂದ ಕಾಮಗಾರಿಗಳು ವಿಳಂಬವಾಗಿದ್ದು, ಪ್ರಸ್ತುತ ಕಾಮಗಾರಿ ಪ್ರಗತಿಯಲ್ಲಿರುತ್ತದೆ.
ಉ)	ಈ ಕಾಮಗಾರಿಗಳು ಎಷ್ಟು ದಿನಗಳಲ್ಲಿ ಸಂಪೂರ್ಣಗೊಂಡು ಬೆಟಾಲಿಯನ್ ಕಾರ್ಯಾರಂಭ ಮಾಡಲಿದೆ ?	ತ್ವರಿತವಾಗಿ ಕ್ರಮಕೈಗೊಳ್ಳಲಾಗುವುದು.

ಸಂಖ್ಯೆ: ಹೆಚ್‌ಡಿ 114 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

ಅನುಬಂಧ-1

ಕಾರ್ಯ ನಿರ್ವಾಹಕ ಸಿಬ್ಬಂದಿಗಳು

ಕ್ರ ಸಂ	ಹುದ್ದೆಗಳು	ಬಲ
1	ಕಮಾಂಡೆಂಟ್	01
2	ಡೆಪ್ಯೂಟಿ ಕಮಾಂಡೆಂಟ್	01
3	ಸಹಾಯಕ ಕಮಾಂಡೆಂಟ್	04
4	ಆರ್.ಪಿ.ಐ.	09
5	ಆರ್.ಎಸ್.ಐ.	20
6	ಎ.ಆರ್.ಎಸ್.ಐ.	66
7	ಆರ್.ಹೆಚ್.ಸಿ.	225
8	ಆರ್.ಪಿ.ಸಿ.	617
9	ಅನುಯಾಯಿ ಜಮೇದಾರ್	08
10	ಅನುಯಾಯಿ	84
	ಒಟ್ಟು	**1035**

ಲಿಪಿಕ ಸಿಬ್ಬಂದಿಗಳು

ಕ್ರ ಸಂ	ಹುದ್ದೆಗಳು	ಬಲ
1	ಸಹಾಯಕ ಆಡಳಿತಾಧಿಕಾರಿ	01
2	ಶಾಖಾಧೀಕ್ಷಕರು	02
3	ಪ್ರಥಮ ದರ್ಜೆ ಸಹಾಯಕರು	04
4	ದ್ವಿತೀಯ ದರ್ಜೆ ಸಹಾಯಕರು	06
5	ಶೀಘ್ರಲಿಪಿಗಾರರು	02
6	ಕಂಪ್ಯೂಟರ್ ಆಪರೇಟರ್	02
7	ದಲಾಯತ್	05
	ಒಟ್ಟು	**22**

ವೈದ್ಯಕೀಯ ಸಿಬ್ಬಂದಿಗಳು

ಕ್ರ ಸಂ	ಹುದ್ದೆಗಳು	ಬಲ
1	ವೈದ್ಯಾಧಿಕಾರಿ (ಪುರುಷ)	01
2	ವೈದ್ಯಾಧಿಕಾರಿ (ಮಹಿಳೆ)	01
3	ನರ್ಸ್ (ಪುರುಷ)	01
4	ನರ್ಸ್ (ಮಹಿಳೆ)	01
5	ಕಂಪೌಂಡರ್	01
6	ಅಟೆಂಡರ್	01
	ಒಟ್ಟು	**06**

<u>ಕರ್ನಾಟಕ ವಿಧಾನ ಸಭೆ</u>

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1922

2) ಮಾನ್ಯ ಸದಸ್ಯರ ಹೆಸರು : ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ್ (ಬೈಲಹೊಂಗಲ)

3) ಉತ್ತರಿಸುವ ದಿನಾಂಕ : 29/09/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರವು ಕಂದಾಯ, ಪೊಲೀಸ್ ಹಾಗೂ ವಾಣಿಜ್ಯ ವಿಭಾಗಗಳ ಕೇಂದ್ರ ಸ್ಥಾನವಾಗಿರುವುದರಿಂದ ಸಾರ್ವಜನಿಕರು ಸದರಿ ಇಲಾಖೆಗಳ ಕೆಲಸಕ್ಕೆ ಹಾಗೂ ರೈತರು ಕೃಷಿ ಕೆಲಸಗಳಿಗೆ ಹಾಗೂ ವಿದ್ಯಾರ್ಥಿಗಳು ಶಾಲಾ-ಕಾಲೇಜಿಗೆ ಬರುವುದರಿಂದ ಬೈಲಹೊಂಗಲ ನಗರದಲ್ಲಿ ಟ್ರಾಫಿಕ್ ಸಮಸ್ಯೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಬೆಳಗಾವಿ ಜಿಲ್ಲೆ ಬೈಲಹೊಂಗಲ ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ)	ಹಾಗಿದ್ದಲ್ಲಿ, ಬೈಲಹೊಂಗಲದಲ್ಲಿ ಟ್ರಾಫಿಕ್ ಪೊಲೀಸ್ ಠಾಣೆ ತೆರೆಯಲು ಕೈಗೊಂಡಿರುವ ಕ್ರಮಗಳೇನು ?	ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಗಳ ಮಾನದಂಡಗಳನ್ನು ಪೂರೈಸಿದಲ್ಲಿ ಬೈಲಹೊಂಗಲದಲ್ಲಿ ಟ್ರಾಫಿಕ್ ಪೊಲೀಸ್ ಠಾಣೆ ತೆರೆಯುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಹೆಚ್‌ಡಿ 112 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 161

2] ಮಾನ್ಯ ಸದಸ್ಯರ ಹೆಸರು : ಶ್ರೀ ಕುಮಾರ ಬಂಗಾರಪ್ಪ ಎಸ್.(ಸೊರಬ)

3] ಉತ್ತರಿಸುವ ದಿನಾಂಕ : 29.09.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಸೊರಬ ವಿಧಾನಸಭಾ ಕ್ಷೇತ್ರದಲ್ಲಿರುವ ಪೊಲೀಸ್ ಠಾಣೆಗಳಲ್ಲಿ ಹಾಗೂ ಪೊಲೀಸ್ ವಸತಿ ಗೃಹಗಳಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಪೊಲೀಸ್ ಸಿಬ್ಬಂದಿಗಳಿಗೆ ಆಗುತ್ತಿರುವ ಸಮಸ್ಯೆಗಳ ಸರ್ಕಾರದ ಗಮನದಲ್ಲಿದೆಯೇ;	ಸೊರಬ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಸೊರಬ ಪೊಲೀಸ್ ಠಾಣೆ ಮತ್ತು ಅನವಟ್ಟಿ ಪೊಲೀಸ್ ಗೃಹಗಳಿಗೆ ಹಾಗೂ ಈ ಪೊಲೀಸ್ ಠಾಣೆಗಳ ವಸತಿಗೃಹಗಳಲ್ಲಿ ಇಲಾಖೆಯಿಂದ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದ್ದು, ಯಾವುದೇ ಕೊರತೆ ಇರುವುದಿಲ್ಲ.
ಆ)	ಹಾಗಿದ್ದಲ್ಲಿ, ಸೊರಬ ತಾಲ್ಲೂಕಿನಲ್ಲಿ ಉತ್ತಮ ದರ್ಜೆಯ ವಸತಿ ಗೃಹಗಳ ನಿರ್ಮಾಣ ಮಾಡಲು ಮುಂದಿನ ಆಯವ್ಯಯದಲ್ಲಿ ಅನುದಾನ ಮಂಜೂರಾತಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;	ಪೊಲೀಸ್ ಗೃಹ 2025 ಯೋಜನೆಯಡಿಯಲ್ಲಿ ಹೊಸದಾಗಿ ನಿರ್ಮಾಣ ಮಾಡುವ ಸಂಬಂಧ ಅನುದಾನದ ಲಭ್ಯತೆಯನುಸಾರ ಪರಿಶೀಲಿಸಿ ಈ ಬಗ್ಗೆ ಕ್ರಮ ಕೈಗೊಳ್ಳಲಾಗುವುದು
ಇ)	ಸೊರಬ ತಾಲ್ಲೂಕಿನಲ್ಲಿ ಹೋಬಳಿ ಮಟ್ಟದಲ್ಲಿರುವ ಪೊಲೀಸ್ ಠಾಣೆಗಳಿಗೆ ನೂತನ ಸುಸಜ್ಜಿತ ಕಟ್ಟಡ ಮಂಜೂರಾತಿ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?	

ಸಂಖ್ಯೆ: ಹೆಚ್ ಡಿ 86 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 394

2) ಮಾನ್ಯ ಸದಸ್ಯರ ಹೆಸರು : ಶ್ರೀ ನಿಂಬಣ್ಣನವರ್.ಸಿ.ಎಂ. (ಕಲಘಟಗಿ)

3) ಉತ್ತರಿಸುವ ದಿನಾಂಕ : 29/09/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಲಘಟಗಿ ತಾಲ್ಲೂಕಿನಲ್ಲಿಯೇ ಅತಿ ದೊಡ್ಡ ಗ್ರಾಮವಾದ ಮಿಶ್ರೀಕೋಟಿಯಲ್ಲಿ ಕೇವಲ ಪೊಲೀಸ್ ಔಟ್‌ಪೋಸ್ಟ್ ಇದ್ದು ನೂತನ ಪೊಲೀಸ್ ಠಾಣೆಯನ್ನು ತೆರೆಯುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ ;	ಇರುವುದಿಲ್ಲ.
ಆ)	ಗ್ರಾಮದಲ್ಲಿ ವಿವಿಧ ಸಮುದಾಯದವರು ವಾಸಿಸುತ್ತಿದ್ದು ಈ ಗ್ರಾಮದ ಸುತ್ತಮುತ್ತ 30-35 ಗ್ರಾಮಗಳು ಬರುತ್ತಿದ್ದು ಹಬ್ಬ ಹರಿದಿನಗಳಲ್ಲಿ ಕೋಮು ಗಲಭೆಗಳಂತ ಅಹಿತಕರ ಘಟನೆಗಳು ಜರುಗುತ್ತಿದ್ದು ಕಾನೂನು ಸುವ್ಯವಸ್ಥೆ ಕಾಪಾಡಲು ಆಗಾಗ ತೊಂದರೆ ಉಂಟಾಗುತ್ತಿದ್ದು ಇದನ್ನು ತಡೆಯಲು ಸರ್ಕಾರ ಕೈಗೊಂಡ ಕ್ರಮಗಳೇನು ;	2012ನೇ ಸಾಲಿನಿಂದ ಇಲ್ಲಿಯವರೆಗೆ ಕೋಮು ಭಾವನೆ ಕೆರಳಿಸುವಂತಹ ಯಾವುದೇ ಘಟನೆಗಳು ಸಂಭವಿಸಿರುವುದಿಲ್ಲ. ಬೀಟ್ ಉಸ್ತುವಾರಿ ಅಧಿಕಾರಿ/ಸಿಬ್ಬಂದಿಯವರು ಸತತವಾಗಿ ಎಲ್ಲಾ ಗ್ರಾಮಗಳ ಮುಖಂಡರೊಡನೆ ಸಂಪರ್ಕದಲ್ಲಿದ್ದು, ಕೋಮು ಭಾವನೆ ಕೆರಳಿಸುವ ಕೋಮು ಸೌಹಾರ್ದತೆಗೆ ಧಕ್ಕೆ ತರುವಂತಹವರ ವಿರುದ್ಧ ಮುಂಜಾಗ್ರತ ಕ್ರಮ ಕೈಗೊಳ್ಳಲಾಗುವುದು ಹಾಗೂ ಕ್ರಮವಾಗಿ ಪ್ರಕರಣಗಳನ್ನು ದಾಖಲಿಸಲಾಗುವುದು.
ಇ)	ಮಿಶ್ರೀಕೋಟಿ ಗ್ರಾಮದ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರ ಭದ್ರತೆ ಹಾಗೂ ಶಾಂತತೆಯ ದೃಷ್ಟಿಯಿಂದ ಅಲ್ಲಿ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಮಟ್ಟದ ಸ್ವತಂತ್ರ ಪೊಲೀಸ್ ಠಾಣೆಯನ್ನು ತೆರೆಯುವುದು ಅವಶ್ಯವಿರುವುದರಿಂದ ಯಾವ ಕಾಲಮಿತಿಯೊಳಗೆ ಸರ್ಕಾರ ಪೊಲೀಸ್ ಠಾಣೆಯನ್ನು ತೆರೆದು ಸಿಬ್ಬಂದಿಯನ್ನು ನಿಯೋಜಿಸುವುದು ? (ಸಂಪೂರ್ಣ ಮಾಹಿತಿ ನೀಡುವುದು)	ಮಿಶ್ರೀಕೋಟಿ ಪ್ರದೇಶದ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ರಾಷ್ಟ್ರೀಯ ಪೊಲೀಸ್ ಆಯೋಗದ ಮಾರ್ಗಸೂಚಿಯನ್ವಯ ಮಾನದಂಡಗಳನ್ನು ಪೂರೈಸಿದಲ್ಲಿ ಈ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಹೆಚ್‌ಡಿ 115 ಪಿಓಪಿ 2020

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು.

ಕರ್ನಾಟಕ ವಿಧಾನ ಸಭೆ

1] ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1382

2] ಮಾನ್ಯ ಸದಸ್ಯರ ಹೆಸರು : ಶ್ರೀ ಪಾಟೀಲ್ ಎಂ.ವೈ (ಅಫ್ಜಲ್‌ಪುರ)

3] ಉತ್ತರಿಸುವ ದಿನಾಂಕ : 15.12.2020.

4] ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
ಅ)	ಅಫಜಲ್‌ಪೂರ ಮತಕ್ಷೇತ್ರ ಫರಹತಾಬಾದ್ ಹಾಗೂ ಅಫಜಲ್‌ಪೂರ್ ಪೊಲೀಸ್ ಠಾಣೆಗಳ ಕಟ್ಟಡಗಳು ಶಿಥಿಲಾವಸ್ಥೆಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
ಆ)	ಶಿಥಿಲಾವಸ್ಥೆಯಲ್ಲಿರುವ ಕಟ್ಟಡಗಳನ್ನು ನೆಲಸಮಗೊಳಿಸಿ ಇಲ್ಲಿ ಹೊಸ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;	ಫರತಾಬಾದ್ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ ಕಾಮಗಾರಿ ಕೈಗೊಳ್ಳಲು ದಿನಾಂಕ:02.11.2020 ರಂದು ಅನುಮತಿ ನೀಡಿ ಆದೇಶ ಹೊರಡಿಸಲಾಗಿದ್ದು, ಟೆಂಡರ್ ಕರೆಯಲಾಗಿದೆ. ಅಫಜಲ್‌ಪೂರ ಪೊಲೀಸ್ ಠಾಣೆ ಕಟ್ಟಡ ನಿರ್ಮಾಣ ಕುರಿತು ಅನುದಾನದ ಆದ್ಯತೆಯನುಸಾರ ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
ಇ)	ಈಗಾಗಲೇ ಅಫಜಲ್‌ಪೂರ ಹಾಗೂ ಫರಹತಾಬಾದ ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡಗಳನ್ನು ನಿರ್ಮಾಣ ಮಾಡುವ ಪ್ರಸಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು, ಈ ಪ್ರಸ್ತಾವನೆಗೆ ಯಾವ ಕಾಲಮಿತಿಯೊಳಗೆ ಮಂಜೂರಾತಿ ನೀಡಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಹೆಚ್ ಡಿ 112 ಪಿಬಿಎಲ್ 2020

[ಬಸವರಾಜ ಬೊಮ್ಮಾಯಿ]
ಮಾನ್ಯ ಗೃಹ ಸಚಿವರು

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1457

2) ಮಾನ್ಯ ಸದಸ್ಯರ ಹೆಸರು : ಶ್ರೀ ಉಮಾನಾಥ.ಎ.ಕೋಟ್ಯಾನ್ (ಮೂಡಬಿದ್ರೆ)

3) ಉತ್ತರಿಸುವ ದಿನಾಂಕ : 15/12/2020

4) ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ನೂತನ ತಾಲ್ಲೂಕುಗಳಾದ ಮೂಡಬಿದ್ರೆ ಮತ್ತು ಮುಲ್ಕಿ ಪ್ರದೇಶವು ರಾಜ್ಯ ಮತ್ತು ರಾಷ್ಟ್ರೀಯ ಹೆದ್ದಾರಿಗಳಿಗೆ ಸಂಪರ್ಕ ಹೊಂದಿರುವ ನಗರ ಪ್ರದೇಶವಾಗಿ ಬೆಳೆದಿರುವುದರಿಂದ ಸಂಚಾರಿ ಪೊಲೀಸ್ ಠಾಣೆಯ ಅವಶ್ಯಕತೆ ಇದ್ದು, ಠಾಣೆಗಳನ್ನು ಮಂಜೂರು ಮಾಡಲು ಸರ್ಕಾರವು ಸಕಾಲಿಕ ಕ್ರಮಗಳನ್ನು ಜರುಗಿಸುವುದೇ ;	ಹೌದು. ಅನುದಾನದ ಲಭ್ಯತೆಯನುಸಾರ ಠಾಣೆಗಳನ್ನು ಮಂಜೂರಿಸಲು ಪರಿಶೀಲಿಸಲಾಗುವುದು.
ಆ)	ಹಾಲಿ ಇರುವ ಪೊಲೀಸ್ ವ್ಯವಸ್ಥೆಯಲ್ಲಿ ಸಂಚಾರ ನಿಯಂತ್ರಣ ವ್ಯವಸ್ಥೆಯೂ ಸೇರಿದಂತೆ ನಿರ್ವಹಣಾ ಒತ್ತಡ ಮತ್ತು ಆರಕ್ಷಕ ಸೇವೆಯನ್ನು ಒದಗಿಸಿಕೊಡಲು ಸೂಕ್ತ ಮಟ್ಟದಲ್ಲಿ ಸಿಬ್ಬಂದಿ ವರ್ಗದ ಅವಶ್ಯಕತೆ ಇದ್ದು, ಆ ಕುರಿತು ಸರ್ಕಾರ ಕ್ರಮ ಜರುಗಿಸುವುದೇ ;	ಮೂಡಬಿದ್ರೆ ಮತ್ತು ಮುಲ್ಕಿ ಪ್ರದೇಶದಲ್ಲಿ ಹಾಲಿ ಇರುವ ಪೊಲೀಸ್ ವ್ಯವಸ್ಥೆಯಲ್ಲಿ ಸಂಚಾರ ನಿಯಂತ್ರಣ ವ್ಯವಸ್ಥೆಯೂ ಸೇರಿದಂತೆ ಸಿಬ್ಬಂದಿಗಳ ನಿರ್ವಹಣಾ ಒತ್ತಡ ಮತ್ತು ಆರಕ್ಷಕ ಸೇವೆಯನ್ನು ಒದಗಿಸಿಕೊಡಲು ಅನುಕೂಲವಾಗುವಂತೆ ತಾತ್ಕಾಲಿಕವಾಗಿ ಹೆಚ್ಚುವರಿಯಾಗಿ 15 ಗೃಹರಕ್ಷಕ ಸಿಬ್ಬಂದಿಗಳನ್ನು ಕರ್ತವ್ಯಕ್ಕೆ ನೇಮಿಸಲಾಗಿರುತ್ತದೆ. ಅಲ್ಲದೇ ಮುಲ್ಕಿ ತಾಲ್ಲೂಕಿನ ಪ್ರದೇಶಗಳಿಗೆ ಸಂಚಾರ ಉತ್ತರ ಠಾಣೆಯಿಂದ ಸಂಚಾರ ನಿಯಂತ್ರಣ ಕರ್ತವ್ಯಕ್ಕೆ ಸಿಬ್ಬಂದಿಗಳನ್ನು ನೇಮಿಸಲಾಗಿರುತ್ತದೆ. ಮೂಡಬಿದ್ರೆಯಲ್ಲಿ ಹೊಸದಾಗಿ ಸಂಚಾರಿ ಪೊಲೀಸ್ ಠಾಣೆಯನ್ನು ತೆರೆಯುವ ಕುರಿತು ಪ್ರಸ್ತುತ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಹಾಲಿ ಠಾಣೆಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿರುತ್ತದೆ.
ಇ)	ಮೂಡಬಿದ್ರೆ ಮತ್ತು ಮುಲ್ಕಿ ತಾಲ್ಲೂಕು ಕೇಂದ್ರಗಳಲ್ಲಿ ಸಂಚಾರಿ ಪೊಲೀಸ್ ಠಾಣೆಯನ್ನು ತುರ್ತಾಗಿ ಪ್ರಾರಂಭಿಸಲು ಹಾಗೂ ಅಲ್ಲಿನ ಪೊಲೀಸ್ ಸಿಬ್ಬಂದಿಗಳ ಹಾಗೂ ಮೂಲಸೌಲಭ್ಯಗಳ ಕೊರತೆಯನ್ನು ಸರಿಪಡಿಸುವ ಮೂಲಕ ಆಡಳಿತ ನಿರ್ವಹಣೆಗೆ ಅನುಕೂಲ ಮಾಡಿಕೊಡುವಲ್ಲಿ ಸರ್ಕಾರದ ಕ್ರಮಗಳೇನು ?	

ಸಂಖ್ಯೆ: ಹೆಚ್‌ಡಿ 138 ಪಿಒಪಿ 2020

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು.

ಕರ್ನಾಟಕ ವಿಧಾನ ಸಭೆ

01.	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	1390
02.	ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು	:	ಶ್ರೀ. ನಂಜೇಗೌಡ. ಕೆ.ವೈ. (ಮಾಲೂರು)
03.	ಉತ್ತರಿಸುವ ದಿನಾಂಕ	:	15-12-2020
04.	ಉತ್ತರಿಸುವ ಸಚಿವರು.	:	ಮಾನ್ಯ ಗೃಹ ಸಚಿವರು.

ಕ್ರ ಸಂ	ಪ್ರಶ್ನೆ	ಉತ್ತರ
ಅ	ಮಾಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ಒಟ್ಟು ಎಷ್ಟು ಅಪರಾಧ ಪ್ರಕರಣಗಳು ದಾಖಲಾಗಿವೆ (ವರ್ಷವಾರು ವಿವರ ಒದಗಿಸುವುದು)	ಮಾಲೂರು ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಇಲ್ಲಿಯವರೆಗೂ ದಾಖಲಾಗಿರುವ ಅಪರಾಧ ಪ್ರಕರಣಗಳು ಹಾಗೂ ವರ್ಷವಾರು ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸಲಾಗಿದೆ.

ವರ್ಷ	ದಾಖಲಾದ ಪ್ರಕರಣಗಳು
2017	455
2018	350
2019	384
2020 (ನವಂಬರ್ ವರೆಗೆ)	463

ಕ್ರ ಸಂ	ಪ್ರಶ್ನೆ	ಉತ್ತರ
ಆ	ಯಾವ ಯಾವ ಅಪರಾಧಗಳಡಿ ಪ್ರಕರಣಗಳನ್ನು ದಾಖಲಿಸಲಾಗಿದೆ (ವಿವರ ಒದಗಿಸುವುದು)	ಯಾವ ಯಾವ ಅಪರಾಧಗಳಡಿ ಪ್ರಕರಣಗಳನ್ನು ದಾಖಲಿಸಲಾಗಿದೆ ಎಂಬ ವಿವರಗಳನ್ನು **ಅನುಬಂಧ-2** ದಲ್ಲಿ ನೀಡಲಾಗಿದೆ.
ಇ	ಈ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳ ರೌಡಿ ಶೀಟರ್‌ಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)	ಮಾಲೂರು ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಲ್ಲಿ ದಾಖಲಾಗಿರುವ ಅಪರಾಧ ಪ್ರಕರಣಗಳ ರೌಡಿ ಶೀಟರ್‌ಗಳ ಸಂಖ್ಯೆಯ ವಿವರ ಈ ಕೆಳಕಂಡಂತಿದೆ.

ವರ್ಷ	ಮಾಲೂರು ಪೊ.ಠಾಣೆ	ಮಾಸ್ತಿ ಪೊ.ಠಾಣೆ	ಒಟ್ಟು ರೌಡಿ ಶೀಟರ್‌ಗಳ ಸಂಖ್ಯೆ
2017	30	17	47
2018	0	4	4
2019	0	5	5
2020 (ನವಂಬರ್ ವರೆಗೆ)	0	1	1
ಒಟ್ಟು	**30**	**27**	**57**

ಕ್ರ ಸಂ	ಪ್ರಶ್ನೆ	ಉತ್ತರ
ಈ	ರಾಜ್ಯದಲ್ಲಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ(ವಿವರ ಒದಗಿಸುವುದು)?	ರಾಜ್ಯದಲ್ಲಿ ಅಪರಾಧ ಪ್ರಕರಣಗಳನ್ನು ಕಡಿಮೆ ಮಾಡಲು ಕೈಗೊಂಡಿರುವ ಕ್ರಮಗಳ ವಿವರಗಳನ್ನು ಅನುಬಂಧ-1 ರಲ್ಲಿ ಒದಗಿಸಲಾಗಿದೆ.

ಕಡತ ಸಂಖ್ಯೆ: ಒಇ26 **ಪಿಸಿಕ್ಯೂ** 2020.

(ಬಸವರಾಜ ಬೊಮ್ಮಾಯಿ)
ಮಾನ್ಯ ಗೃಹ ಸಚಿವರು

ಅನುಬಂಧ-1

1. ರಾತ್ರಿ ಗಸ್ತುಗಳನ್ನು ಹೆಚ್ಚಿಸುವುದರೊಂದಿಗೆ, ರಾತ್ರಿ ಗಸ್ತು ಮಾಡುವ ತಂಡಕ್ಕೆ ವಾಹನ ಸೌಲಭ್ಯವನ್ನು ಒದಗಿಸಲು ಹಾಗೂ ರಾತ್ರಿ ಗಸ್ತು ಮಾಡುವ ಸಿಬ್ಬಂದಿಗಳ ತಂಡಕ್ಕೆ ಒಬ್ಬ ಹಿರಿಯ ಪೊಲೀಸ್ ಅಧಿಕಾರಿಯನ್ನು ಉಸ್ತುವಾರಿಗಾಗಿ ನೇಮಿಸಲು ಸೂಚಿಸಲಾಗಿದೆ.

2. ಗಸ್ತಿನ ಎಲ್ಲಾ ಸಿಬ್ಬಂದಿಯವರಿಗೆ ಸೂಕ್ತ ಶಸ್ತ್ರಾಸ್ತ್ರಗಳನ್ನು ಪೂರೈಸುವುದು ಹಾಗೂ ಕಾನೂನಿನ ಚೌಕಟ್ಟಿನಲ್ಲಿ ಅದನ್ನು ಉಪಯೋಗಿಸಲು ಅಗತ್ಯ ಮಾರ್ಗದರ್ಶನ ನೀಡಲು ತಿಳಿಸಿದೆ.

3. ರಾತ್ರಿ ಗಸ್ತಿನ ತಂಡದವರು ವಾಹನ ತಪಾಸಣೆ ಮಾಡಿ ಅವುಗಳಲ್ಲಿ ಪ್ರಯಾಣಿಕರ ಸೋಗಿನಲ್ಲಿ ಸಂಚರಿಸುತ್ತಿರುವ ವ್ಯಕ್ತಿಗಳನ್ನು ತಪಾಸಣೆ ಮಾಡಿ ಕೂಲಂಕುಷವಾಗಿ ಪ್ರಶ್ನಿಸಿ ಅನುಮಾನಾಸ್ಪದ ವ್ಯಕ್ತಿಗಳನ್ನು ದಸ್ತಗಿರಿ ಮಾಡುವುದು ಹಾಗೂ ಗಸ್ತು ವಾಹನ ವ್ಯವಸ್ಥೆಯನ್ನು ಹಗಲು ಮತ್ತು ರಾತ್ರಿ ವೇಳೆಯಲ್ಲಿ ನಗರದ ಮಾರುಕಟ್ಟೆ ಪ್ರದೇಶಗಳಲ್ಲಿ ಪರಿಣಾಮಕಾರಿಯಾಗಿ ಚುರುಕುಗೊಳಿಸುವುದು ಹಾಗೂ ವಿಶೇಷವಾಗಿ ಬಸ್‌ನಿಲ್ದಾಣಗಳಲ್ಲಿ ನಿಯೋಜಿಸಲ್ಪಡುವ ಸಿಬ್ಬಂದಿಗಳಿಗೆ ಸೂಕ್ತ ಮಾರ್ಗದರ್ಶನ ನೀಡಿ ಹಾಗೂ ಅಲ್ಲಿ ಆಗುವ ಕಳ್ಳತನಗಳನ್ನು ತಡೆಯಲು ವಿಫಲರಾದರೆ ಅವರುಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

4. ಸಂಶಯಾಸ್ಪದ ವಾಹನಗಳಲ್ಲಿ ಸಂಚರಿಸುವ ವ್ಯಕ್ತಿಗಳನ್ನು ತಪಾಸಣೆ ಮಾಡಿ, ಸದರಿ ವಾಹನಗಳಲ್ಲಿ ಮಾರಕಾಸ್ತ್ರಗಳನ್ನು ಕೊಂಡೊಯ್ಯುತ್ತಿರುವ ಬಗ್ಗೆ ಹೆಚ್ಚಿನ ನಿಗಾ ವಹಿಸಲು ಸೂಚಿಸಲಾಗಿದೆ.

5. ಆಗಿಂದಾಗ್ಗೆ ನಾಕಾ ಬಂದಿಯನ್ನು ಹಾಗೂ ಲರ್ಕಿಂಗ್ ಪಾಯಿಂಟ್ ಚೆಕ್ಕಿಂಗ್‌ನ್ನು ಹಿರಿಯ ಪೊಲೀಸ್ ಅಧಿಕಾರಿಗಳು ಆಗಾಗ್ಗೆ ಪರಿಶೀಸಲು ತಿಳಿಸಲಾಗಿದೆ.

6. ರಾತ್ರಿಗಸ್ತಿನಲ್ಲಿ ಅನುಮಾನಾಸ್ಪದವಾಗಿ ಮಲಗಿರುವವರನ್ನು ಎಬ್ಬಿಸಿ ವಿಚಾರಣೆ ಮಾಡಿದರೆ ತಲೆಮರೆಸಿಕೊಂಡಿರುವ ಕೆ.ಡಿ / ಡಿ.ಸಿ ಕ್ರಿಮಿನಲ್ಸ್ /ಹಿಸ್ಟ್ರಿ ಶೀಟೆಡ್ ವ್ಯಕ್ತಿಗಳು /ಎಂ ಓ ಆರೋಪಿಗಳು ಪತ್ತೆಯಾಗುವ ಸಾಧ್ಯತೆಯಿರುತ್ತದೆ.

7. ನೆರೆಹೊರೆಯ ಕಾವಲು ಯೋಜನೆ, ಗ್ರಾಮಗಸ್ತು ಹಾಗೂ ಜನ ಸಂಪರ್ಕ ಸಭೆಗಳನ್ನು ಕ್ಲುಪ್ತ ಕಾಲಕ್ಕೆ ನಡೆಸುತ್ತಿರಬೇಕು. ಇಂತಹ ಸಭೆ ನಡೆಸುವ ಕಾಲದಲ್ಲಿ ಸಾರ್ವಜನಿಕರಿಗೆ ಮನೆಗಳಲ್ಲಿ ಅನಾವಶ್ಯಕವಾಗಿ ಹೆಚ್ಚಿನ ನಗದು/ಆಭರಣಗಳನ್ನು ಸಾರ್ವಜನಿಕರು ಇಟ್ಟುಕೊಳ್ಳದಂತೆ ತಿಳಿಸುವುದು ಹಾಗೂ ಜೊತೆಗೆ ಹೆಂಗಸರು / ಹೆಣ್ಣುಮಕ್ಕಳು ಬೆಲೆಬಾಳುವ ಆಭರಣಗಳನ್ನು ಹೊರಗೆ ಕಾಣುವಂತೆ ಪ್ರದರ್ಶಿಸ ಬಾರದಾಗಿ ಸೂಚಿಸುವುದು. ಇಂತಹ ಸಭೆ ಸಂದರ್ಭಗಳಲ್ಲಿ ಒಳ್ಳೆಯ ವ್ಯಕ್ತಿಗಳನ್ನು ಗುರುತಿಸಿ ಅವರುಗಳನ್ನು ಬಾತ್ಮೀದಾರರನ್ನಾಗಿ ಇರಿಸಿಕೊಂಡು ಅಪರಿಚಿತ ವ್ಯಕ್ತಿಗಳ ಮೇಲೆ ನಿಗಾ ಇಡಲು ಮತ್ತು ಪ್ರಕರಣಗಳ ಹಾಗೂ ಅಪರಾಧಿಗಳ ಬಗ್ಗೆ ಮಾಹಿತಿ ಸಂಗ್ರಹಿಸಲು ತಿಳಿಸಲಾಗಿದೆ.

8. ಸರಹದ್ದಿನ ಗೌರವಾನ್ವಿತ ಹಿರಿಯ ವ್ಯಕ್ತಿಗಳನ್ನು ಗುರುತಿಸಿ, ಅವರೊಂದಿಗೆ ರಾತ್ರಿಗಸ್ತು ಮಾಡುವುದು ಹಾಗೂ ಎನ್‌ಸಿಸಿ / ಗೃಹರಕ್ಷಕದಳ / ಮಾಜಿ ಸೈನಿಕರು / ಗೌರವಾನ್ವಿತ ಸಂಘ ಸಂಸ್ಥೆಗಳ ಕಾರ್ಯಕರ್ತರ ಸಹಯೋಗದೊಂದಿಗೆ ಕರ್ತವ್ಯ ನಿರ್ವಹಿಸುವುದು.

9. ಒಂಟಿ ಮನೆಗಳು / ತೋಟದ ಮನೆಗಳಲ್ಲಿ ವಾಸಿಸುವ ಜನರನ್ನು ಗುರುತಿಸಿ ಸ್ವರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನು ಇಟ್ಟುಕೊಳ್ಳಲು ಸಲಹೆ ಸೂಚನೆಗಳನ್ನು ನೀಡಲು ತಿಳಿಸಲಾಗಿದೆ.

10. ಅಪರಾಧ ನಡೆದ ಬಗ್ಗೆ ಮಾಹಿತಿ ಸ್ವೀಕರಿಸಿದ ತಕ್ಷಣ ಸರಹದ್ದಿನ ಹಾಗೂ ಗಡಿ ಪ್ರದೇಶಗಳ ಎಲ್ಲಾ ಪೊಲೀಸ್ ಠಾಣೆಗಳಿಗೆ ನಿಸ್ತಂತು ಸಂದೇಶವನ್ನು ನೀಡಿ ಕಳುವಾದ ಮಾಲಿನ ಹಾಗೂ ಅಪರಾಧಿಗಳ ಚಹರೆ ಇತ್ಯಾದಿಗಳ ಬಗ್ಗೆ ಮಾಹಿತಿಯನ್ನು ಒದಗಿಸಿ ಕೂಡಲೇ ಕಾರ್ಯಪ್ರವೃತ್ತರಾಗಲು ತಿಳಿಸಲಾಗಿದೆ.

11. ಕೃತ್ಯ ನಡೆದ ಮಾಹಿತಿ ಸ್ವೀಕರಿಸಿದ ಪೊಲೀಸ್ ಠಾಣೆಗಳ ಅಧಿಕಾರಿಗಳು ಕೂಡಲೇ ಕಾರ್ಯ ಪ್ರವೃತ್ತರಾಗಿ ಅವರ ಸರಹದ್ದಿನಲ್ಲಿ ಎಲ್ಲಾ ಹೆದ್ದಾರಿಗಳನ್ನು ತಡೆ ಮಾಡಿ ವಾಹನಗಳ ತಪಾಸಣೆ ಕಾರ್ಯವನ್ನು ನಿರ್ವಹಿಸುವುದು.

12. ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಎಲ್ಲೇ ಡಕಾಯಿತಿ ಅಥವಾ ಸುಲಿಗೆಯಾದಲ್ಲಿ ಸಂಬಂಧಪಟ್ಟ ಡಿವೈಎಸ್‌ಪಿ/ಸಿಪಿಐ/ಪಿಎಸ್‌ಐ ಅಧಿಕಾರಿಗಳು ಕೂಡಲೇ ಸ್ಥಳಕ್ಕೆ ಧಾವಿಸಿ ಅಪರಾಧಿಗಳನ್ನು ಪತ್ತೆ ಹಚ್ಚಲು ಕ್ರಮ ಕೈಗೊಳ್ಳಲು ತಿಳಿಸಿದೆ.

13. ಕೃತ್ಯದಲ್ಲಿ ನೊಂದವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಅವರಿಂದ ಆರೋಪಿತರ ಚಹರೆಯನ್ನು ಪಡೆದು ಜಿಲ್ಲಾ ಪೊಲೀಸ್ ಕಛೇರಿ ಅಥವಾ ಇತರೇ ವಿಭಾಗದ ಕಂಪ್ಯೂಟರ್‌ನಿಂದ ಆರೋಪಿತರ ಮುಖ ಚಿತ್ರವನ್ನು (portrait) ಮಾಡಿಸಿ ಶಂಕಿತ ವ್ಯಕ್ತಿಗಳನ್ನು ಪತ್ತೆ ಮಾಡಿ ಪ್ರಶ್ನಿಸಿ ಅಪರಾಧಿಗಳ ಬೆರಳಚ್ಚುಗಳಿಗಾಗಿ ಸೂಕ್ಷ್ಮ ಅವಲೋಕನ ನಡೆಸುವುದು.

14. ಸರಹದ್ದಿನ ಎಲ್ಲಾ ಎಂ.ಓ/ರೌಡಿ/ಹಿಸ್ಟ್ರೀ ಶೀಟೆಡ್/ತಲೆಮರೆಸಿಕೊಂಡಿರುವ (ಓವಿ) ವ್ಯಕ್ತಿಗಳನ್ನು ಪತ್ತೆ ಮಾಡಿ ವಾರಕ್ಕೊಮ್ಮೆ ಠಾಣೆಗೆ ಕರೆಸಿ ಅವರ ಹಿನ್ನೆಲೆಯನ್ನು ಹಾಗೂ ಹಾಲಿ ಅವರು ಏನು ಕೆಲಸ ಮಾಡುತ್ತಿದ್ದಾರೆ / ಯಾವುದಾದರೂ ಪ್ರಕರಣಗಳಲ್ಲಿ ಭಾಗಿಯಾಗಿರುವರೆ ಎಂಬ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡ ತಕ್ಕದ್ದು. ಅವರ ಹಳೆಯ ಭಾವಚಿತ್ರಗಳನ್ನು ಠಾಣೆಯ ರೋಗ್ಸ್ ಗ್ಯಾಲರಿ, ಹಿಸ್ಟ್ರೀಶೀಟ್, ಎಂಓಬಿ ಕಾರ್ಡ್‌ನಲ್ಲಿ ಬದಲಿಸಿ ಅವರ ಇತ್ತೀಚಿನ ಭಾವಚಿತ್ರಗಳನ್ನು ತೆಗೆಸಿ ಇಟ್ಟುಕೊಳ್ಳುವುದು.

15. ನೆರೆಹೊರೆಯ ಠಾಣೆಯ ಸರಹದ್ದಿನಲ್ಲಿ ವಿಶೇಷವಾಗಿ ರಾತ್ರಿ ಗಸ್ತಿನಲ್ಲಿರುವ ಸಿಬ್ಬಂದಿಗಳನ್ನು ಮಾತಾಡಿಸಿ ಅವರ ಸರಹದ್ದಿನ ಅಪರಾಧಿಗಳು / ಎಂ ಓ ಮತ್ತು ಹಿಸ್ಟ್ರೀ ಶೀಟೆಡ್ ವ್ಯಕ್ತಿಗಳ ಬಗ್ಗೆ ವಿಚಾರ ವಿನಿಮಯ ಮಾಡಿಕೊಂಡು ಪ್ರಕರಣ ಹಾಗೂ ಆರೋಪಿಗಳ ಬಗ್ಗೆ ಮಾಹಿತಿ ಸಂಗ್ರಹಿಸುವುದು.

16. ಸರಹದ್ದಿನಲ್ಲಿ ತೆರೆದಿರುವ ಗುಜರಿ ಅಂಗಡಿಗಳು ಮತ್ತು ಕದ್ದ ಮಾಲುಗಳನ್ನು ಸ್ವೀಕರಿಸುವ ಅಂಗಡಿಗಳ ಮೇಲೆ ಗಮನವಿರಿಸಿ ಕಾನೂನಿನ ಕ್ರಮ ತೆಗೆದುಕೊಳ್ಳುವುದು.

17. ಠಾಣಾಧಿಕಾರಿಗಳು ಕಳವು, ಸರಗಳ್ಳತನ, ಸುಲಿಗೆ ಪ್ರಕರಣಗಳ ಕುರಿತು ಭಿತ್ತಿಪತ್ರ / ಕರಪತ್ರಗಳನ್ನು ಮುದ್ರಿಸಿ ಹಂಚಿ ಸಾರ್ವಜನಿಕ ಸ್ಥಳಗಳಾದ ರೈಲ್ವೆ ಸ್ಟೇಷನ್, ಬಸ್ ನಿಲ್ದಾಣ, ಮಾರುಕಟ್ಟೆ ಇತ್ಯಾದಿ ಜನನಿಬಿಡ ಪ್ರದೇಶಗಳಲ್ಲಿ ಪ್ರಚಾರ ಪಡಿಸುತ್ತಿದ್ದಾರೆ.

18. ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಟೆಂಟುಗಳು ಮತ್ತು ಜೋಪಡಿಗಳಲ್ಲಿ ಅಥವಾ ಇನ್ನಿತರೇ ತಾತ್ಕಾಲಿಕ ವಸತಿಗಳಲ್ಲಿ ಇರುವ ಅಪರಿಚಿತರ ತಪಾಸಣೆ ಮಾಡಿ ಸೂಕ್ತ ಕ್ರಮ ಜರುಗಿಸುವುದು.

19. ಅವಶ್ಯವಿದ್ದ ಕಡೆ ಹೋಟೆಲ್‌ಗಳಲ್ಲಿ ಬಂದಿಳಿದಿರುವ ಅನುಮಾನಾಸ್ಪದ ವ್ಯಕ್ತಿಗಳನ್ನು ಪರಿಶೀಲಿಸುವುದು.

20. ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿಟ್ಟಿರುವ ಎಲ್ಲಾ ಗಸ್ತುಗಳ ಪಾಯಿಂಟ್ ಪುಸ್ತಕಗಳನ್ನು ಬೆಳಿಗ್ಗೆ ಮತ್ತು ರಾತ್ರಿ ಒಂದು ಸಾರಿ ಪಿ.ಎಸ್.ಐ/ಎ.ಎಸ್.ಐ ರವರುಗಳು ಹೋಗಿ ತಪಾಸಣೆ ಮಾಡಿ ಸಿಬ್ಬಂದಿಯವರು ಗಸ್ತು ಸರಿಯಾಗಿ ಮಾಡುತ್ತಿರುವರೇ ಇಲ್ಲವೇ ಎಂಬುದನ್ನು ಪರಿಶೀಲಿಸಬೇಕೆಂದು ಘಟಕಾಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಲಾಗಿದೆ.

21. ಎಂಓಬಿ ಕಾರ್ಡ್ಸ್/ಜಿಸಿಆರ್/ಎಕ್ಸ್ ಕನ್ವಿಕ್ಟ್ ರಿಜಿಸ್ಟರ್/ಕೆಡಿ/ಡಿಸಿ ಅಪರಾಧಿಗಳ ಗ್ಯಾಂಗ್ ರಿಜಿಸ್ಟರ್ ಮುಂತಾದ ಅಪರಾಧಿಗಳ ಮೊಬೈಲ್ ನಂಬರ್‌ಗಳ ಟವರ್ ಲೊಕೇಷನ್/ಕಾಲ್ ಡಿಟೈಲ್ಸ್‌ಗಳನ್ನು ಪರಿಶೀಲನೆ ಮಾಡಿ ಪ್ರಕರಣಗಳ ತನಿಖೆಯನ್ನು ಚುರುಕುಗೊಳಿಸಿ, ಪ್ರಕರಣಗಳನ್ನು ಪತ್ತೆ ಮಾಡುವುದು.

22. ಬೆಂಗಳೂರು ನಗರ ಹಾಗೂ ಇತರೆ ಜಿಲ್ಲೆಗಳಲ್ಲಿ ಮಾದಕ ವಸ್ತುಗಳ, ಸೈಬರ್ ಕ್ರೈಂ ಪ್ರಕರಣಗಳ ತಡೆಗಟ್ಟುವಿಕೆಗಾಗಿ ಒಟ್ಟು 41 ಸಿ ಇ ಎನ್ (ಸೈಬರ್ ಎಕಾನಾಮಿಕ್ಸ್ ನಾರ್ಕೋಟಿಕ್ಸ್) ಪೊಲೀಸ್ ಠಾಣೆಗಳನ್ನು ಹೊಸದಾಗಿ ಸ್ಥಾಪಿಸಲಾಗಿರುತ್ತದೆ.

ಅನುಬಂಧ-2

ಮಾಲೂರು ವಿಧಾನ ಸಭಾ ಕ್ಷೇತ್ರದಲ್ಲಿ ವರದಿಯಾದ ಅಪರಾಧ ಪ್ರಕರಣಗಳು

CRIME HEAD	MALUR POLICE STATION				MASTHI POLICE STATION			
	2017	2018	2019	2020	2017	2018	2019	2020
Murder	3	2	5	4	1	4	2	1
Attempt to murder	3	1	5	3	2	1	2	1
C.H.Not Amounting to murder	0	0	2	0	0	0	0	0
Dacoity	0	1	1	0	0	0	0	0
Preparation And Assembly For Dacoity	0	2	1	0	0	0	1	0
Robbery	2	1	0	1	0	0	0	0
Chain Snatching	3	0	2	0	0	0	0	0
H.B.T by day	2	2	4	0	0	1	0	1
H.B.T by night	6	5	13	2	1	2	3	2
House theft	3	0	0	0	0	0	0	0
Ordinary Theft	32	32	21	32	6	2	7	4
Cattle thefts	0	3	1	1	0	2	0	0
Receiving stolen Property	0	0	0	0	0	0	0	0
Cheating	23	6	9	2	0	9	2	2
Cr.Br.Trust	2	2	0	0	0	0	0	0
C.C.Notes	0	0	0	0	0	0	0	0
304(A),IPC	31	29	31	31	10	7	13	12
279,337,338 IPC	64	59	76	45	13	12	13	15
Rioting	18	6	11	14	17	6	5	29
Hurts	23	28	39	33	16	10	11	31
Acid Attack (326(a))	0	0	0	0	0	0	0	0
Kidnapping	4	4	6	4	1	3	0	4
304(B) IPC	1	0	1	0	1	0	0	3
498 (A) IPC	2	0	0	1	3	1	3	2
354 IPC Molestation	11	6	4	13	1	2	1	7
Rape	1	0	0	0	0	0	0	0
353 IPC	2	3	2	4	0	3	0	1
Other IPC	25	15	9	42	6	2	5	13
Arms Act	1	0	2	0	0	0	0	0
Cow Slaughter	0	0	0	0	0	0	0	0
Animal Sacrifice Act	1	0	0	2	0	0	0	0
P.I.T Act	1	0	2	0	0	0	0	0
POCSO	2	7	5	1	1	1	2	3
K.P Act	0	3	2	1	0	1	0	0
E.C Act	1	1	0	2	0	0	0	0
SC/ST/Act	10	3	1	2	4	4	1	2
Explosive Act	0	1	0	1	0	2	0	0
N.D.P.S AcT	2	2	1	2	0	0	2	0

TADA Act	0	0	0	0	0	0	0	0
PCR Act	0	0	0	0	0	0	0	0
R.P.Act	0	0	1	0	0	0	0	0
Children Act	0	0	0	1	1	0	0	0
Sati Act	0	0	0	0	0	0	0	0
Cinema Autography Act	0	0	0	0	0	0	0	0
Gambling Act	6	11	7	5	10	8	5	3
Excise Act	4	1	4	6	1	1	3	6
D.P Act	2	5	4	4	1	0	0	0
Other Special and Local Laws	14	7	4	1	10	3	1	2
Missing Person	34	11	23	29	10	4	3	30
Sub Total - PART-III	339	259	299	289	116	91	85	174